

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 267 | Saturday 05-07-2025 | E-mail : maruti.b.hosamani76@gmail.com | Page: 4 | Price : Rs. 1/-

## ಯೋಗ್ಯವಲ್ಲದ ನೀರು ಕುಡಿದು ಸತ್ತರೆ ಯಾರು ಹೊಣೆ: ಡಿ.ಸಿ.ಯವರೇ ಇತ್ತ ಕಣ್ಣಾಯಿಸಿರಿ



**ಸಿಹಿ ಕಹಿ ಸುದ್ದಿ,**
**ನಕ್ಕುಂದಿ:** ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಕೊಡಲಾಗುತ್ತದೆ ಎಂದು ಸರಕಾರ ಹೇಳುತ್ತದೆ. ಆದರೆ ಮಾನ್ವಿ ತಾಲೂಕಿನ ನಕ್ಕುಂದಿ ಗ್ರಾಮದ ಕೆರೆಯಿಂದ ಸರಬರಾಜಾಗುವ ಕುಡಿಯುವ ನೀರು ಯೋಗ್ಯ ಇಲ್ಲದಿದ್ದರು ಅನಾಹುತವಾಗಿ ಯಾರಾದರು ಸತ್ತರೆ ಇದಕ್ಕೆ ಯಾರು ಹೊಣೆ ಎಂದು ಗ್ರಾಮಸ್ಥರ ಆರೋಪವಾಗಿದೆ.



ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ನಕ್ಕುಂದಿ ಗ್ರಾಮದಲ್ಲಿ ಇರುವ ಕೆರೆಯಿಂದ ಸರಬರಾಜಾಗುವ ಕುಡಿಯುವ ನೀರು ಅನ್ಯೆರ್ಮಲ್ಯವಾದರು ಸಹ ಪಿಡಿಓ ಬಸವರಾಜ ಮತ್ತು ಕುಡಿಯುವ ನೀರು ಮತ್ತು ನ್ಯೆರ್ಮಲ್ಯ ಇಲಾಖೆ ಅಧಿಕಾರಿಗಳ ದುರಾಡಳಿತದಿಂದ ಅಮಾಯಕರು ಸತ್ತರೆ ಅಧಿಕಾರಿಗಳಿಗೆ ಖುಷಿನಾ ಎಂದು ಗ್ರಾಮಸ್ಥರ ಅಳಲು ಆಗಿದೆ.
ನಕ್ಕುಂದಿ ಗ್ರಾಮದ ಅಮಾಯಕ ಬಡ ಜನರು ಟ್ಯಾಂಕ್ಮೂಲಕ ಸರಬರಾಜಾಗುವ ಕೆರೆಯ ನೀರನ್ನೆ ಬಳಸುತ್ತಿದ್ದು, ರಾಯಚೂರು ಜಿಲ್ಲಾಧಿಕಾರಿ ಸಾಹೇಬ್ರೆ ಅನಾಹುತ ಸಂಭವಿಸುವ ಮುನ್ನವೇ ನಕ್ಕುಂದಿ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಗ್ರಾಮಸ್ಥರ ಮನಸ್ಸಿನ ಮಾತಾಗಿದೆ.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಪ್ರಾಥಮಿಕ, ಪ್ರೌಢ ಶಾಲೆಯಲ್ಲಿ ಖಾಲಿ ಇರೋ ಹುದ್ದೆಗಳಿಗೆ ಖಾಯಂ ಶಿಕ್ಷಕರ ಭರ್ತಿಗೆ – ಡಿ.ಸಿ ಮೂಲಕ ಸರ್ಕಾರ ಮನವಿ

**ಸಿಹಿ ಕಹಿ ಸುದ್ದಿ,**
**ವಿಜಯನಗರ :** ವಿಜಯನಗರ ಜಿಲ್ಲೆಯ ಸಹಕಾರಿಶಾಲಾಅಭಿವೃದ್ಧಿವೇದಿಕೆವತಿಯಿಂದ ಹೋರಾಟವನ್ನು ಹಮ್ಮಿಕೊಳ್ಳಲಾಯಿತು
ಪ್ರಾಥಮಿಕ, ಪ್ರೌಢ ಶಾಲೆಯಲ್ಲಿ ಖಾಲಿ ಇರೋ ಹುದ್ದೆಗಳಿಗೆ ಖಾಯಂ ಶಿಕ್ಷಕರ ಭರ್ತಿಗೆ ಡಿ.ಸಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲು ಪ್ರೋತ್ಸಂಖ್ಯೆಯಲ್ಲಿ ಆಗಮಿಸಿದ್ದರು.



"ದಲಿತರಿಗೆ ಅನ್ಯಾಯ ಮಾಡುವುದನ್ನು ನಿಲ್ಲಿಸುವಂತೆ ನಾವು ಸರ್ಕಾರವನ್ನು ವಿನಂತಿಸುತ್ತೇವೆ (ಜ್ಯೋತಿಬಾ ಪುಲೆ ಅವರ ಪ್ರಕಾರ – ಎಸ್ಸಿ ಎಸ್ಟಿ ಒಬಿಸಿ ಮಹಿಳೆಯರು ಭೂ ರಹಿತರು, ಅಲ್ಪ ಸಂಖ್ಯಾತರಂತೆ ದಮನಕ್ಕೊಳಗಾದ ಯಾರನ್ನಾದರೂ ದಲಿತರೆಂದು ಪರಿಗಣಿಸಲಾಗುತ್ತದೆ) ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರಕಾರ, ಉತ್ತಮ ಗುಣಮಟ್ಟದ ಶಿಕ್ಷಣ ಮಾತ್ರದಲಿತರಜೀವನವನ್ನುಬದಲಾಯಿಸಬಹುದು.ಆದರೆ ಹಿಂದಿನ ಸರ್ಕಾರ ಮತ್ತು ಪ್ರಸ್ತುತ ಸರ್ಕಾರವು ಶಿಕ್ಷಣದ ಗುಣ ಮಟ್ಟವನ್ನು ಸುಧಾರಿಸಲು ಕನಿಷ್ಠ ಗಮನ ನೀಡದಿರುವುದು ನಮಗೆ ಅಶ್ಚರ್ಯವನ್ನುಂಟು ಮಮಾಡುತ್ತಿದೆ ಸರ್ಕಾರವು ಶಿಕ್ಷಣದ ಖಾಸಗೀಕರಣವನ್ನು ದೊಡ್ಡ ಪ್ರಮಾಣದಲ್ಲಿ ಏಕೆ ಉತ್ತೇಜಿಸುತ್ತಿದೆ? ಇದರಿಂದ ಈ ರಾಜ್ಯ ಮತ್ತು ದೇಶದ 50% ಕ್ಕಿಂತ ಹೆಚ್ಚು ಬಡವರಿಗೆ ಅನ್ಯಾಯವಾಗಿದೆ.
ಈಗಾಗಲೇ ಕಳೆದ ಎರಡು ವರ್ಷಗಳಿಂದ ಈ ಎಲ್ಲಾ ಕೆಳಗಿನ ಬೇಡಿಕೆಗಳಿಗೆ ಮನವಿಗಳನ್ನು ಸಲ್ಲಿಸುತ್ತಾ ಬರುತ್ತಿದ್ದೇವೆ. ಆದರೆ ಸರ್ಕಾರ ಈ ನಾಡಿನ ಮಕ್ಕಳ ಭವಿಷ್ಯದ ಬಗ್ಗೆ ಕಿಂಚಿತ್ತೂ ಅಸಕ್ತಿ ತೋರಿಸದಿರುವುದು ವಿಪರ್ಯಾಸ.
ಖಾಲಿ ಇರುವ ಎಲ್ಲಾ ಶಿಕ್ಷಕರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಿ, ಅಲ್ಲಿಯವರೆಗೆ 1002 ಹುದ್ದೆಗಳನ್ನು ತಕ್ಷಣವೇ (ಜೂಲೈ) ಅಥಿತಿ ಶಿಕ್ಷಕರನ್ನು ನೇಮಿಸಬೇಕು,ಸರ್ಕಾರವು ವಿಷಯವಾರು/ತರಗತಿವಾರು ಶಿಕ್ಷಕರನ್ನು ನೇಮಿಸಬೇಕು. ತಕ್ಷಣಕನಿಷ್ಠ100ಕ್ಕಿಂತಹೆಚ್ಚುವಿದ್ಯಾರ್ಥಿಗಳಿರುವಶಾಲೆಗಳಲ್ಲಿ ಇದನ್ನು ಅನುಷ್ಠಾನ ಮಾಡಬೇಕು, ಶಿಕ್ಷಣದ ಗುಣಮಟ್ಟ ತುಂಬಾ ಕೆಟ್ಟದಾಗಿದೆ. ಸರ್ಕಾರ ತಕ್ಷಣ ಒಂದು ಕ್ರಿಯಾ ಯೋಜನೆಯನ್ನು ರೂಪಿಸಿ ಮುಂದಿನ 3 ತಿಂಗಳೊಳಗೆ ಗುಣಮಟ್ಟ ಸುಧಾರಣೆಗೆ ಕ್ರಮ ತೆಗೆದು ಕೊಳ್ಳಬೇಕು, ಮೂಲಭೂತ ಸೌಕರ್ಯಗಳಾದ ಕೊಠಡಿಗಳು, ವಿದ್ಯುತ್, ಶೌಚಾಲಯಗಳು, ಕುಡಿಯುವ ನೀರು, ಗ್ರಂಥಾಲಯ, ವಿದ್ಯಾರ್ಥಿನಿಯರಿಗೆ ನಿರಂತರವಾಗಿ ಪ್ಯಾಡಗಳ ವಿತರಣೆ, ಕ್ರೀಡೆ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದು, ಪ್ರತಿ ಶಾಲೆಗೆ ಒಬ್ಬರು ಪರಿಚಾರಕರನ್ನು ನೇಮಿಸುವುದು.
ಮಡಿಕೆಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಜಿಲ್ಲೆಯ ಡಿಡಿಪಿಐ ಯವರು ಶಾಲೆಯ ಸ್ಥಿತಿಗತಿಗಳ ಕುರಿತು ಶ್ವೇತ ಪತ್ರವನ್ನು ಬಿಡುಗಡೆ ಮಾಡಬೇಕು. ಕೆ.ಕೆ.ಆರ್.ಡಿ.ಪಿ ಮತ್ತು ಪ್ರಾದೇಶಿಕ ಶಿಕ್ಷಣ ಆಯುಕ್ತರು 2 ತಿಂಗಳೊಳಗೆ ತೆಗೆದು ಕೊಳ್ಳಬೇಕಾದ ಕ್ರಮಗಳ ಕುರಿತು ವರದಿಯನ್ನು ಸಲ್ಲಿಸಬೇಕು ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು, ಸಮಾಜ ಕಲ್ಯಾಣ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು, ಮಹಿಳಾ ಮತ್ತು ಮಕ್ಕಳ ಇಲಾಖೆ ಮತ್ತು ಕೆಲವು ತಜ್ಞರನ್ನು ಹಾಗೂ ಶಿಕ್ಷಣ ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಬೇಕು ಮತ್ತು ಮೇಲ್ವಿಚಾರಣೆ ಮಾಡಿ ಸುಧಾರಣೆಗೆ ಕ್ರಮಗಳನ್ನು ಸೂಚಿಸಬೇಕು.
ತಮ್ಮ ಸರ್ಕಾರ ಈ ಬೇಡಿಕೆಗಳನ್ನು ಅನುಷ್ಠಾನ ಮಾಡುವ ಮುಖಾಂತರ ನಮ್ಮ ನಾಡಿನ 80% ಕುಟುಂಬಗಳಿಗೆ ಗೌರವ ಕೊಡುತ್ತೀರೆಂದು ನಂಬಿದ್ದೇವೆ.
ಸರ್ಕಾರಿ ಶಾಲೆಗಳಲ್ಲಿನ ಖಾಲಿ ಇರುವ ವಿಜಯನಗರ ಜಿಲ್ಲೆಯ ತಾಲೂಕು ವಾರು ವಿವರ

| ತಾಲೂಕು | ಪ್ರೈಮರಿ | ಪ್ರೌಢ |
|---|---|---|
| 1) ಹೊಸಪೇಟ್ | 232 | 57 |
| 2) ಹಡಗಲಿ | 108 | 54 |
| 3) ಹ ಬೊ ಹಳ್ಳಿ | 174 | 25 |
| 4) ಹರಪನಹಳ್ಳಿ | 228 | 36 |
| 5} ಕೂಡ್ಲಿಗಿ | 242 | 55 |

Total = ಪೂರ್ವ ಪ್ರಾಥಮಿಕ ಶಾಲೆಯಲ್ಲಿ 984 ಹುದ್ದೆ ಖಾಲಿ ಇದ್ದು ಈ ಪೈಕಿ 594 ಅತಿಥಿ ಶಿಕ್ಷಕರ ನೇಮಕ ಮಾಡಿ ಕೊಳ್ಳಲಾಗಿದೆ ಹಾಗೇನೇ ಪ್ರೌಢ ಶಾಲೆಯಲ್ಲಿ 227 ಹುದ್ದೆ ಖಾಲಿ ಇದ್ದು ಈ ಪೈಕಿ 178 ಅತಿಥಿ ಶಿಕ್ಷಕರನ್ನು ತಗೆದು ಕೊಂಡಿದ್ದಾರೆ ಮಾಹಿತಿಗಾಗಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಜನರು ಅವರ ಸಾಂವಿಧಾನಿಕ ಹಕ್ಕುಗಳಿಗಾಗಿ ಹೋರಾಟ ಮಾಡಲು ಸಿದ್ದರಾಗಿದ್ದಾರೆ ಎಂದು ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಕರ್ನಾಟಕ ಸರ್ಕಾರ ಸಿದ್ದರಾಮಯ್ಯ ಮುಖ್ಯಮಂತ್ರಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸರಕಾರಿ ಶಾಲೆ ಅಭಿವೃದ್ಧಿ ವೇದಿಕೆ ಮುಖಂಡರು ಹೊಸಪೇಟೆ ತಾಲೂಕ ಶೈನಜ್ ಜಿಲ್ಲಾ ಸಂಚಾಲಕರು. ಮಂಜುಳಾ. ಶಾಮಲಾ. ನಾರಾಯಣ. ಮಂಜುಳಾ. ದುರುಗಮ್ಮ. ಹನುಮಕ್ಕ. ಗಂಗಮ್ಮ ಶಾರದಮ್ಮ. ರೂಪ್. ಪಾರ್ವತಮ್ಮ. ಹಗರಿಬೊಮ್ಮನಹಳ್ಳಿ ತಾಲೂಕ್. ಅಕ್ಕಮಹಾದೇವಿ. ರೇಖಾ. ಹನುಮಕ್ಕ. ನಿಂಗಮ್ಮ. ರತ್ನಮ್ಮ. ಸುಧಾ ಮಾಲಾಶ್ರೀ.
ಹರಪನಹಳ್ಳಿ. ಶ್ರುತಿ. ನಿಂಗರಾಜಾ. ಹಡಗಲಿ. ಎಲ್ಲಮ್ಮ. ಕೂಡ್ಲಿಗಿ. ಕುಮಾರಸ್ವಾಮಿ ಹಾಗೂ ಪದಾಧಿಕಾರಿಗಳು ಸದಸ್ಯರು ಹೋರಾಟಕ್ಕೆ ಆಗಮಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಅಳಿವಿನಂಚಿನಲ್ಲಿರುವ ನೇಕಾರಿಕೆಗೆ ಪೂರಕ ಬೆಂಬಲಬೇಕು: ಹೊನವಾಡ



**ಬನಹಟ್ಟಿ :** ಭಯಾನಕ ಪರಿಸ್ಥಿತಿ ಎದುರಿಸುತ್ತಿರುವ ನೇಕಾರಿಕೆ ಉದ್ಯಮಕ್ಕೆ ಸರ್ಕಾರದಿಂದ ಹಾಗು ಬೃಹತ್ ಜವಳಿ ಉದ್ಯಮಿಗಳಿಂದ ಪೂರಕ ಬೆಂಬಲ ಒದಗಿಸಬೇಕಾದ ತುರ್ತು ಅನಿವಾರ್ಯತೆ ಇದೆ ಎಂದು ನೇಕಾರ ಮುಖಂಡ ಈರಣ್ಣ ಹೊನವಾಡ ಹೇಳಿದರು.
ನಗರದ ಈಶ್ವರಲಿಂಗ ಮೈದಾನದಲ್ಲಿ ಬಾಗಲಕೋಟ ನೇಕಾರ ಸಹಕಾರಿ ಸಂಘದ ಆವರಣದಲ್ಲಿ ಜರುಗಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅತ್ಯಂತ ದಯನೀಯ ಪರಿಸ್ಥಿತಿ ಎದುರಿಸುತ್ತಿರುವ ನೇಕಾರಿಕೆಗೆ ಮರುಜೀವ ನೀಡುವುದು ಅನಿವಾರ್ಯವಾಗಿದೆ.
ಇವೆಲ್ಲವುಗಳಿಗೆ ಸರ್ಕಾರ ಹಾಗು ಸಹಕಾರಿ ಕ್ಷೇತ್ರ ಸ್ಪಂದಿಸುವ ಮೂಲಕ ತೀವ್ರ ತುಳಿತಕ್ಕೊಳಗಾದ ನೇಕಾರ ಸಮುದಾಯವನ್ನು ಮೇಲೆತ್ತುವ ಕಾರ್ಯವಾಗಬೇಕೆಂದರು.
ಮತ್ತೋರ್ವ ನೇಕಾರ ಮುಖಂಡ ಶಂಕರ ಸೋರಗಾಂವಿ ಮಾತನಾಡಿ, ನೇಕಾರರು ಹೋರಾಟ ನಡೆಸಲು ಸಹಿತ ಧ್ವನಿಯಾಗುವಲ್ಲಿ ನಿಸ್ಸಹಾಯಕರಾಗಿದ್ದಾರೆ. ನೇಕಾರಿಕೆಯಲ್ಲಿ ಯಾವುದೇ ಹುರುಳಿಲ್ಲವೆಂದು ಅರಿತು ಅನ್ಯ ಉದ್ಯೋಗದತ್ತ ವಾಲುತ್ತಿದ್ದು, ನೇಕಾರ ಮಾಲಿಕರೊಂದಿಗೆ ನೇಕಾರರನ್ನೂ ಕಾಳಜಿ ಪೂರ್ವಕವಾಗಿ ಸರ್ಕಾರ ಬೆನ್ನು ತಟ್ಟುವ ಕಾರ್ಯವಾಗಬೇಕೆಂದರು.
ಇದೇ ಸಂದರ್ಭ ಪ್ರಕಾಶ ಮಂಡಿ, ಮೋಹನ ಪತ್ತಾರ, ವಿಜಯಕುಮಾರ ಇಂಗಳಗಾವಿ, ಈರಪ್ಪ ಹನಗಂಡಿ, ಡಿ. ಡಿ. ರಾಠಿ, ಹಂಪನ್ನವರ, ಶ್ರೀಶೈಲ ಬಾಗಲಕೋಟ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## "ಕನ್ನಡಿಗರ ಅಭಿಮಾನ"

**ಸಿಹಿ ಕಹಿ ಸುದ್ದಿ,**




ಕನ್ನಡ ಕವಿರತ್ನರೆ
ಜ್ಞಾನಪೀಠ ಪ್ರಶಸ್ತಿಗೆ
ಬಾಜಿನರಾದವರೇ
ಋಷಿ ಮುನಿಗಳ ತಪಸ್ಸಿಗೆ
ವೀರ ಶೂರತನಕ್ಕೆ
ಹೆಸರಾದವರೇ
ಕಲೆ ಸಾಹಿತ್ಯ ಸಂಸ್ಕೃತಿ
ನಾಡಿನ
ಬೀಡಿಗೆ ತಲೆಬಾಗಿದವರೇ
ನಡೆ ನುಡಿ ಪ್ರೀತಿ ತ್ಯಾಗಕ್ಕೆ
ಮುನ್ನಡೆ ಬರೆದವರೇ
ಇದ್ದರೆ ಮತ್ತೊಂದು
ಜನುಮ ಮತ್ತೆ ಕನ್ನಡ ನಾಡಲ್ಲೆ ಹುಟ್ಟಿ ಬರುವೆ ಎಂದವರೇ

ನಾಡಿನ ಕವಿಗಳ ಸಾಹಿತಿಗಳ ದಾಸರ ಸಂತರ ಕೀರ್ತನೆಗಳ ಸಂಗೀತದ
ಕೋಗಿಲೆಯ ಒಡಲು ನಮ್ಮ ಕಾವೇರಿ ಮಡಿಲು
ಇತಿಹಾಸದ ಪುಟದಲ್ಲಿ ಮರೆತರೆ ಮರೆಯಲಾಗದ ಮಾಣಿಕ್ಯದ
ಮುತ್ತುರತ್ನಗಳು ಕವಿ ವನ್ಯರು

ಓ ಕನ್ನಡ ಮಾತೆ
ಮಾನವರಲ್ಲಿ ಜಾತಿ, ಮತ ಪಂಗಡಗಳ ಬೇಗ ಬಾವ ಕಳೆದುಬಿಡು
ಜಗತ್ತಿನಾದ್ಯಂತ ತುಂಬಿರುವ ನರಭಕ್ಷಕರ ವಂಚನೆಯನ್ನು
ಕೊಂದುಬಿಡು
ಸ್ತ್ರೀ ರಕ್ಷಣೆಗೆ ಜಗತ್ತಿನ ಎಲ್ಲಾ ಶಕ್ತಿಯನ್ನು ಒಂದುಗೂಡಿ ಬಿಡು
ಕನ್ನಡ ನಾಡ ನುಡಿಯಲಿ ಸಂಸ್ಕೃತಿಯ ಬೀಜವ ಹರಡಿ ಬಿಡು

ನಿನ್ನ ಧರ್ಮದ ಕಾರ್ಯಕ್ಕೆ ಅಧರ್ಮ ಕುಗ್ಗಿ ಹೋಗಲಿ
ಕಿಡಿಗೇಡಿಗಳ ಕಿಚ್ಚು ಕೊಚ್ಚಿ ಹೋಗಲು ಕೈ ಜೊತೆಯಾಗಿರಲಿ
ನಿನ್ನಲ್ಲಿ ಅಡಗಿರುವ ಅಜ್ಞಾನವ ಕಳೆದು ಜ್ಞಾನದ ಜ್ಯೋತಿ ಬೆಳಗಲಿ
ನಾನು ನನ್ನದು ಎಂಬ ಭೂತ ಹಿಂದೆ ಒಡೆದು ಹೋಗಲಿ
ಕನ್ನಡ ಮಾತೆಯೇ ನನ್ನ ಹೃದಯದ ಆರತಿ ಎಂದೆಂದೂ ಸಿದ್ಧವಾಗಿರಲಿ

**– ಅನುರಾಧ.ಡಿ ಸನ್ನಿ**
**ಹೂಲಗೇರಿ**

## ಮನು ಕುಲಕ್ಕೆ ಸನ್ಮಾರ್ಗ ತೋರಿದ ಸಂತ ಶಿಶುನಾಳ ಶರೀಫರು: ಸಂತೋಷ ಬಂಡೆ



**ಸಿಹಿ ಕಹಿ ಸುದ್ದಿ,**
**ವಿಜಯಪುರ :** ಜಾತಿ, ಮತ, ಧರ್ಮ ಲೆಕ್ಕಿಸದೇ ಮಾನವತಾ ಧರ್ಮವನ್ನು ಬೋಧಿಸಿದ ಶಿಶುನಾಳ ಶರೀಫರು ಸಮಾಜದ ಕಂದಾಚಾರಗಳನ್ನು ಧೈರ್ಯದಿಂದ ಟೀಕಿಸಿ, ಇಡೀ ಮನು ಕುಲಕ್ಕೆ ಸನ್ಮಾರ್ಗವನ್ನು ತೋರಿಸಿದ್ದಾರೆ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.
ಗುರುವಾರ ದಂದು ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡ 'ಸಂತ ಶಿಶುನಾಳ ಶರೀಫರ ಜಯಂತಿ ಹಾಗೂ ಸ್ಮರಣೆ ದಿನ' ವನ್ನು ಉದ್ದೇಶಿಸಿ ಅವರು ಮಾತನಾಡಿದರು.
ಅನುಭಾವಿಗಳಾದ ಶರೀಫರು ಮುಂದಿನ ಯುವ ಪೀಳಿಗೆಯ ಹಿತ ದೃಷ್ಟಿಯನ್ನಿಟ್ಟುಕೊಂಡು ಸಾಂಸಾರಿಕ ನೆಲೆ ಗಟ್ಟಿನ ಮೇಲೆಯೇ ಆದರ್ಶ ಸಮಾಜದ ಕಲ್ಪನೆಯೊಂದಿಗೆ ಧರ್ಮ ಪರಿಪಾಲನೆಯ ತತ್ವವನ್ನು ಸಾರಿದ್ದಾರೆ. ಅವರ ತತ್ವಪದಗಳನ್ನು ಅರ್ಥೈಸಿ ಕೊಂಡು ಬದುಕು ಹಸನಾಗಿಸಿ ಕೊಳ್ಳಬೇಕು ಎಂದು ಹೇಳಿದರು.
ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, 'ದೇವನೊಬ್ಬ ನಾಮ ಹಲವು' ಎಂಬ ವಿಶ್ವ ತತ್ವವನ್ನು ಅರಿತು, ಸಂಚಾರಿ ಶರಣರಾಗಿ ಬೋಧಿಸುತ್ತಾ, ಬಾಳಿದ ಶರೀಫರ ಸಾಹಿತ್ಯ ಜನ ಸಾಮಾನ್ಯರಿಗೆ ನಿಲುಕು ವಂತಾದಾಗಿದೆ. ಅವರ ತತ್ವಗಳು ಇಂದಿಗೂ ಆದರ್ಶವಾಗಿವೆ ಎಂದು ಹೇಳಿದರು.
ಅತಿಥಿ ವಿಶ್ವನಾಥ ಕಲಗೊಂಡ ಮಾತನಾಡಿ, ಐಕ್ಯತೆ ಹಾಗೂ ಸೌಹಾರ್ದವನ್ನು ಬೆಳೆಸಿ ಕೊಳ್ಳಲು ಅವರ ವೈಚಾರಿಕ ತತ್ವ ಪದಗಳು ಸಹಕಾರಿ ಯಾಗಿವೆ. ಅವರು ಸಾರಿದ ತತ್ವಗಳಿಂದ ಈ ನಾಡಿಗೆ ಇಂದಿಗೂ ಪ್ರಸ್ತುತವೆನಿಸಿದ್ದಾರೆ ಎಂದು ಹೇಳಿದರು.
ವಿಶ್ವನಾಥ ಹಂಡಿ, ಬಸವರಾಜ ಸಾರವಾಡ, ರಾಜು ಕತ್ನಳ್ಳಿ, ಸಂತೋಷ ವಾಲೀಕಾರ, ವಿಶಾಲ ಬಡಿಗೇರ, ಆನಂದ ಅರಕೇರಿ, ಆನಂದ ಗಂಗನಳ್ಳಿ ಸೇರಿದಂತೆ ಅನೇಕ ಮಕ್ಕಳು ಭಾಗವಹಿಸಿದ್ದರು.

## ಚೀಲದಲ್ಲಿ ನವಜಾತ ಹೆಣ್ಣು ಮಗು ಪತ್ತೆ: ಸಾರ್ವಜನಿಕರಿಂದ ರಕ್ಷಣೆ



**ಬಾಗಲಕೋಟೆ :** ತಾಲ್ಲೂಕಿನ ವೀರಾಪೂರ ಪುನರ್ವಸತಿ ಕೇಂದ್ರದ ಬಳಿ ಮನುಷ್ಯತ್ವ ನಾಚಿಸುವ ಘಟನೆ ನಡೆದಿದೆ. ಇಂದು ಬೆಳಿಗ್ಗೆ ಸ್ಥಳೀಯರು ಅಳುವ ಶಬ್ದ ಕೇಳಿ ನೋಡಿದಾಗ, ರಸ್ತೆಯ ಪಕ್ಕದಲ್ಲಿ ಇದ್ದ ಚೀಲವೊಂದರಲ್ಲಿ ಈಗಷ್ಟೇ ಹುಟ್ಟಿದ ನವಜಾತ ಹೆಣ್ಣು ಮಗು ಪತ್ತೆಯಾಗಿದೆ. ಶಿಶು ಅಳುತ್ತಿದ್ದ ಶಬ್ದ ಕೇಳಿದ ಸ್ಥಳೀಯರುತಕ್ಷಣಚೀಲತೆರೆದುಮಗುವನ್ನುರಕ್ಷಿಸಿದರು. ಅಲ್ಲಿ ಇದ್ದ ಮಹಿಳೆಯೊಬ್ಬರು ತಕ್ಷಣ ಎದೆ ಹಾಲು ಉಣಿಸಿದರು. ಮಾಹಿತಿ ಪಡೆದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶಿಶುವಿನ ಸ್ಥಿತಿ ಪರಿಶೀಲಿಸಿದರು. ಬಳಿಕ ಮಗುವನ್ನು ಚಿಕಿತ್ಸೆಗಾಗಿ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಈ ಘಟನೆ ಕಲಾದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಿದ್ದಾರೆ. ಹೆರಿಗೆ ಬಳಿಕ ಮಗು ಹೆಣ್ಣು ಎಂಬ ಕಾರಣಕ್ಕೆ ತ್ಯಜಿಸಿರುವ ಶಂಕೆ ವ್ಯಕ್ತವಾಗಿದೆ.

## ಗುರು–ಶಿಷ್ಯರ ಬಾಂಧವ್ಯ ಗಟ್ಟಿಗೊಳಿಸಲು ಗುರುವಂದನೆ ಪ್ರೇರಣೆಯಾಗಿದೆ

**ಬನಹಟ್ಟಿ :** ವಿದ್ಯೆ ಕಲಿಸಿದ ಗುರುಗಳನ್ನು ತಾವು ಆಡಿ, ನಲಿದ, ಬೆಳೆದ ಶಾಲೆಯ ಸುಂದರ ಕ್ಷಣಗಳನ್ನು ಸಹಪಾಠಿಗಳೊಂದಿಗೆ ನೋವು–ನಲಿವುಗಳನ್ನು ಪರಸ್ಪರ ಹಂಚಿಕೊಂಡ ಖುಷಿಯ ಕ್ಷಣ, 37 ವರ್ಷಗಳ ಬಳಿಕ ಒಂದೆಡೆ ಸೇರಿ ಚದುರಿ ಹೋಗಿದ್ದ ನೆನಪುಗಳನ್ನು ಒಂದುಗೂಡಿಸಲು ಎಸ್.ಆರ್.ಎ. ಯ ಎಸ್ಎಸ್ಎಲ್ಸಿ ಪ್ರೌಢಶಾಲೆ ವಿಭಾಗದ ಹಳೆಯ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುಶಿಷ್ಯರ ಮಹಾಸಂಗಮ ಸಾಕ್ಷಿಯಾಯಿತು.
ನಗರದ ಭದ್ರನ್ನವರ ಕಲ್ಯಾಣ ಮಂಟಪದಲ್ಲಿ ಜರುಗಿದ ಎಸ್.ಆರ್.ಎ. ಮತ್ತು ಸರ್ಕಾರಿ ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ. 1987–88 ರ ಗುರುವಂದನಾ
ಕಾರ್ಯಕ್ರಮದಲ್ಲಿ ಗುರುಗಳಾದ ಡಿ. ಎ. ಬಾಗಲಕೋಟ ಅವರು ಮಾತನಾಡಿ,



ಇತ್ತೀಚಿನ ವರ್ಷಗಳಲ್ಲಿ ಗುರು–ಶಿಷ್ಯರ ಬಾಂಧವ್ಯದ ಗಟ್ಟಿತನ ಸಡಿಲಗೊಳ್ಳುತ್ತಿರುವ ಕಾಲಘಟ್ಟದಲ್ಲಿ ಇದೇ ಪ್ರೌಢ ಶಾಲೆಯಲ್ಲಿ 37 ವರ್ಷಗಳ ಹಿಂದಿನ ಎಸ್ಎಸ್–ಎಲ್ಸಿ ವಿದ್ಯಾರ್ಥಿಗಳ ಗುರುವಂದನೆ ಸಮಾರಂಭವು ಸತ್ಯ, ಒಳ್ಳೆಯತನ, ಪ್ರೀತಿ, ಪ್ರಾಮಾಣಿಕತೆ ಇನ್ನೂ ಉಳಿದಿದೆ ಎನ್ನುವುದಕ್ಕೆ ಸಾಕ್ಷಿಯೆಂದರು.
ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು. ಗುರುವನ್ನು ನೆನೆಯುವದು ಭಾರತೀಯ ಸಂಸ್ಕೃತಿಯಾಗಿದೆ. ಗುರುಗಳನ್ನು ಮರೆತರೆ ಸಂಸ್ಕೃತಿಯನ್ನೇ ಮರೆತಂತೆಯೆಂದು ಹಿರೇಮಠದ ಶರಣಬಸವ ಶಿವಾಚಾರ್ಯರು ತಿಳಿಸಿದರು.
ವೇದಿಕೆಯ ಮೇಲೆ ಬಿ. ಕೆ. ಜಾನಕ್ಕಿ, ಎಚ್. ಆರ್. ಮೆಟಗುಡ್ಡ, ಜಿ. ಎಸ್. ವಡಗಾಂವಿ, ಎ. ಸಿ. ಹಳ್ಳಿ, ಜಯವಂತ ಕಾಡದೇವರ, ಜಿ. ಬಿ. ಪಾಟೀಲ, ಎಸ್. ಬಿ. ಹಾವಿನಾಳ, ಎಸ್. ಆರ್. ಕಲಾದಗಿ, ಜಿ. ಎಂ. ಪಟೇಲ್, ಆರ್. ಟಿ. ನಡುವಿನಮನಿ, ಬಿ. ವಿ. ದೇಶಪಾಂಡೆ, ಬಿ. ಎಸ್. ರಾಮತೀರ್ಥ, ಬಿ. ಎಸ್. ಮಿಳ್ಳಿ, ಕೆ. ಡಿ. ಪತ್ರಿ, ಕೆ. ಜಿ. ಉಮದಿ, ಆರ್. ಜಿ. ನಾವಿ, ಎಂ. ಆರ್. ವಾವಲ, ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.
ಶ್ರೀಶೈಲಬಡಿಗೇರ, ದಳವಾಯಿ, ಮಹಾನಿಂಗ ಒಂಟಿ, ಶಾಂತಾ ಸೋರಗಾಂವಿ, ಬಶೆಟ್ಟಿ, ಕೊಳಕಿ, ಮೋಳೆಗಾಂವಿ ಸೇರಿದಂತೆ ಇನ್ನೂ ಅನೇಕ ಹಳೆಯ ಸಂಗಾತಿಗಳು ಭಾಗವಹಿಸಿದ್ದರು.

# ಪತ್ರಿಕಾ ದಿನಾಚರಣೆ ಪತ್ರಕರ್ತರಿಗೆ ವೃತ್ತಿಪರವಾದ ತರಬೇತಿಯಾಗಲಿ: ಹನುಮಂತ್ ಹಳ್ಳಿಕೇರಿ

**ಕೊಪ್ಪಳ:** ರಾಜ್ಯ ಸಮಿತಿಯ ಸೂಚನೆಯಂತೆ ಪತ್ರಿಕಾ ದಿನಾಚರಣೆ ಕೇವಲ ಪತ್ರಿಕಾ ದಿನಾಚರಣೆ ಗೆ ಅಷ್ಟೇ ಸೀಮಿತವಾಗದೆ ಅದೊಂದು ವೃತ್ತಿಪರವಾದ ಮಾಹಿತಿ ಪೂರ್ಣ ತರಬೇತಿ ಕಾರ್ಯಗಾರದಂತೆ ವಾಗಲಿ ಎಂದು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಕೊಪ್ಪಳ ಜಿಲ್ಲಾ ಅಧ್ಯಕ್ಷ ಹನುಮಂತ ಹಳ್ಳಿಕೇರಿ ಹೇಳಿದರು,

ಅವರು ಶನಿವಾರ ಬೆಳಗ್ಗೆ ಇಲ್ಲಿನ ಪತ್ರಿಕಾ ಭವನದಲ್ಲಿ ಜರುಗಿದ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ರಾಜ್ಯ ಸಂಘದ ಮಾರ್ಗಸೂಚಿ ಎಲ್ಲರು ಪಾಲಿಸಲೇಬೇಕು ಶೀಘ್ರಚುನಾವಣೆಘೋಷಣೆಯಾಗಲಿರುವ ಹಿನ್ನೆಲೆಯಲ್ಲಿ ಜಿಲ್ಲಾ ಸಮಿತಿ ಹಾಗೂ ಜಿಲ್ಲೆಯ ಎಲ್ಲಾ ತಾಲೂಕ ಸಮಿತಿಯವರು ಜೂಲೈ ತಿಂಗಳಲ್ಲಿ ಪತ್ರಿಕಾ ದಿನಾಚರಣೆ ಮಾಡ ಬೇಕು ಅದಕ್ಕಾಗಿ ನಮ್ಮ ಜಿಲ್ಲೆಯ ಆರು ತಾಲೂಕಿನ ತಾಲೂಕ ಸಂಘದ ಸಮಿತಿಯವರು ಜುಲೈ ತಿಂಗಳದ 20ನೇ ತಾರೀಖಿನ ಒಳಗಾಗಿ ತಮ್ಮ ತಮ್ಮ ತಾಲೂಕ ಕೇಂದ್ರದಲ್ಲಿ ಅರ್ಥಪೂರ್ಣವಾದಂತಹ ಪತ್ರಿಕಾ ದಿನಾಚರಣೆ ಆಚರಿಸಬೇಕು ಜುಲೈ ಕೊನೆ ವಾರದಲ್ಲಿ ಜಿಲ್ಲಾ ಕೇಂದ್ರ ಕೊಪ್ಪಳದಲ್ಲಿ ಆಯೋಜಿಸಲಾಗುವುದು ಪತ್ರಿಕ ದಿನಾಚರಣೆಯ ಪ್ರಯುಕ್ತ ಪತ್ರಕರ್ತರ




ಮಕ್ಕಳ ಪ್ರತಿಭಾ ಪುರಸ್ಕಾರ ಪ್ರಸಕ್ತ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 70% ರಷ್ಟು ಅಂಕ ಗಳಿಸಿದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು ಅಲ್ಲದೆ ಪತ್ರಕರ್ತರ ವಾರ್ಷಿಕ ಕ್ರೀಡಾಕೂಟ ಸಹ ಏರ್ಪಡಿಸಲಾಗುವುದು, ಜಿಲ್ಲಾ ಸಂಘದಿಂದ ದತ್ತಿ ಪ್ರಶಸ್ತಿ ಕೆಯುಡಬ್ಲ್ಯೂ ಜೆ ಪ್ರಶಸ್ತಿ ಸೇ-ರಿದಂತೆ ಇತರ ಉತ್ತಮ ಸುದ್ದಿಗಳಿಗಾಗಿ ಪ್ರತ್ಯೇಕ ಪ್ರಶಸ್ತಿ ಅರ್ಹ ಮತ್ತು ಹಿರಿಯ ಅನುಭವಿಪತ್ರಕರ್ತರಿಗೆವಿವಿಧಪ್ರಶಸ್ತಿಗಳನ್ನು ಸಹ ಪತ್ರಿಕಾ ದಿನಾಚರಣೆ ಸಂದರ್ಭದಲ್ಲಿ ನೀಡಲಾಗುವುದು, ಎಲ್ಲಾ ತಾಲೂಕಿನ ಅಧ್ಯಕ್ಷ ಪ್ರಧಾನ ಕಾರ್ಯದರ್ಶಿಗಳು ರಾಜ್ಯ ಸಮಿತಿಯ ಮಾರ್ಗಸೂಚಿ ಪಾಲಿಸಿ ಕಡ್ಡಾಯವಾಗಿ ನಿಗದಿತ ಸಮಯ ಮತ್ತು ಅವಧಿಯೊಳಗೆ ಪತ್ರಿಕಾ ದಿನಾಚರಣೆ ಪೂರ್ಣಗೊಳಿಸಬೇಕು ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಬೇಕು ಎಂದು ಸಂಘದ ಜಿಲ್ಲಾ ಅಧ್ಯಕ್ಷ ಹನುಮಂತ್ ಹೇಳಿಕೇರಿ ಸೂಚಿಸಿದರು,

ಆರಂಭದಲ್ಲಿ ಪ್ರಾಸ್ತಾವಿಕವಾಗಿ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಸಾಧಿಕ ಅಲಿ ಮಾತನಾಡಿದರು ,ವೇದಿಕೆ ಮೇಲೆ ರಾಜ್ಯ ಸಮಿತಿಯ ವಿಶೇಷ ಅಹ್ವಾನಿಕ ಸದಸ್ಯ ಎಚ್ಎಸ್ ಹರೀಶ್ ,ಜಿಲ್ಲಾ ಗೌರವಾಧ್ಯಕ್ಷ ಬಸವರಾಜ್ ಗುಡ್ಲಾನೂರ್ ರಾಷ್ಟ್ರೀಯ ಮಂಡಳಿ ಸದಸ್ಯ ಜಿಎಸ್ ಗೋನಾಳ ಉಪಸ್ಥಿತರಿದ್ದು ತಮ್ಮ ಸಲಹೆ ಸೂಚನೆ ಮತ್ತು ಅನಿಸಿಕೆಗಳನ್ನು ಸಭೆಯಲ್ಲಿ ಮಂಡಿಸಿದರು ಅಲ್ಲದೆ ಜಿಲ್ಲಾ ಖಜಾಂಚಿ ರಾಜು ಬಿ ಆರ್ ಮತ್ತು ಪತ್ರಿಕಾ ಭವನ್ ಕಟ್ಟಡ ಸಮಿತಿ ಅಧ್ಯಕ್ಷ ಎನ್ ಎಂ ದೊಡ್ಡಮನಿ ತಮ್ಮ ಅನಿಸಿಕೆ ಸಲಹೆ ಸೂಚನೆ ವ್ಯಕ್ತಪಡಿಸಿದರು ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೈ ನಾಗರಾಜ ಸಭೆಯ ಕಾರ್ಯ ಕಲಾಪ ನಿರ್ವಹಿಸಿದರೆ ,ಸಂಘದ ಜಿಲ್ಲಾ ಉಪಾಧ್ಯಕ್ಷ ಆರ್ ಬಿ ಪಾಟೀಲ್, ಜಿಲ್ಲಾ ಕಾರ್ಯದರ್ಶಿ, ವೀರಣ್ಣ ಕಳ್ಳಿಮನಿ, ಮಂಜುನಾಥ್ ಅಂಗಡಿ, ಚಾಂದ್ ಸಿಂಗ್ ಕಾರಟಗಿ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ರುದ್ರಪ್ಪ ಭಂಡಾರಿ, ವಿಶ್ವನಾಥ್ ಬೆಳಗಾಳಮಠ, ಖುಷವೇಂದ್ರ ಸ್ವಾಮಿ ನವಲಿ ಹಿರೇಮಠ್, ಚಂದ್ರು ಮುಕ್ಕಂದಿ, ಸಿರಾಜ್ ಬಿಸರಳ್ಳಿ ,ಅಲ್ಲದೆ ಗಂಗಾವತಿ ತಾಲೂಕ ಅಧ್ಯಕ್ಷ ನಾಗರಾಜ ಇಂಗಳಗಿ ,ಕುಕನೂರ್ ಅಧ್ಯಕ್ಷ ನಾಗರಾಜ್ ಬೆಣಕಲ್, ಕನಕಗಿರಿ ಅಧ್ಯಕ್ಷ ಮಧುಸೂಧನ ರೆಡ್ಡಿ, ಕಾರಟಗಿಯ ತಾಲೂಕ ಅಧ್ಯಕ್ಷ ಸಿದ್ದನಗೌಡ ಪಾಟೀಲ್, ಕಾರ್ಯದರ್ಶಿ ಶರಣಪ್ಪ ಕೋಟ್ಯಾಳ ಯಲಬುರ್ಗಾ ತಾಲೂಕ ಅಧ್ಯಕ್ಷ ಶಿವಮೂರ್ತಿ ಇಟಗಿ ಪ್ರಧಾನ ಕಾರ್ಯದರ್ಶಿ ಮಲ್ಲು ಮಾಟರಂಗಿ ತಾಲೂಕ ಕಾರ್ಯದರ್ಶಿ ಮಹಾಂತೇಶ್ ಚಲವಾದಿ, ಕುಷ್ಟಗಿ ಪ್ರಧಾನ ಕಾರ್ಯದರ್ಶಿ ಬಸವರಾಜ್ ಪಲ್ಲೆದ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಆದರ್ಶ ದಂಪತಿ ಪ್ರಶಸ್ತಿಗೆ ಆಯ್ಕೆಯಾದ ಗೋನಾಳ್ ದಂಪತಿಗೆ ಪತ್ರಕರ್ತರ ಸನ್ಮಾನ

**ಕೊಪ್ಪಳ:** ಇಲ್ಲಿನ ಹಿರಿಯ ಪತ್ರಕರ್ತರು ರಾಷ್ಟ್ರೀಯ ಕಾರ್ಯಕಾರಣಿ ಸಮಿತಿ ಸದಸ್ಯರು ಸಾಹಿತಿಗಳು ಆದ ಜಿಎಸ್ ಗೋನಾಳ್ ದಂಪತಿಗಳಿಗೆ ನಾಳೆ ದೊಡ್ಡ ಬಳ್ಳಾಪುರ ದಲ್ಲಿ ಆದರ್ಶ ದಂಪತಿಗಳು ಪ್ರಶಸ್ತಿ ಪ್ರಧಾನ ಮಾಡಲಿರುವ ಈ ಶುಭ ಸಂದರ್ಭದಲ್ಲಿ ಅವರಿಗೆ ಕೊಪ್ಪಳ ಜಿಲ್ಲೆ ಕೆಯುಡಬ್ಲ್ಯೂ ಜೆ ಲ್ಲ ಕಾರ್ಯಕಾರಿ ಸಮಿತಿ ಸದಸ್ಯರು ಅವರ ನಿವಾಸಕ್ಕೆ ತರಲಿ ಜಿಎಸ್ ಗೋನಾಳ್ ದಂಪತಿಗಳನ್ನು ಸನ್ಮಾನಿಸಿ ಶುಭ ಕೋರಿದರು.



ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಕಾರ್ಯನಿರತ ಸಂಘದ ಅಧ್ಯಕ್ಷ ಹನುಮಂತ್ ಹಳ್ಳಿಕೇರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೈ ನಾಗರಾಜ್, ರಾಜ್ಯ ಸಮಿತಿ ಕಾರ್ಯಕಾರಿಸದಸ್ಯಸಾಧಿಕ್ಅಲಿ,ವಿಶೇಷಅಹವಾನಿತ ರಾಜ್ಯ ಸದಸ್ಯ ಎಚ್ಎಸ್ ಹರೀಶ್ ಜಿಲ್ಲಾ ಗೌರವ ಅಧ್ಯಕ್ಷ ಬಸವರಾಜ ಗುಡ್ ಲಾನೂರ್ ಜಿಲ್ಲಾ ಖಜಾಂಚಿ ಬಿ ಆರ್ ರಾಜು ,ಪತ್ರಿಕಾ ಭವನ್ ಕಟ್ಟಡ ಸಮಿತಿ ಅಧ್ಯಕ್ಷ ಎನ್ಎಂ ದೊಡ್ಡಮನಿ, ಜಿಲ್ಲಾ ಉಪಾಧ್ಯಕ್ಷ ಆರ್ ಬಿ ಪಾಟೀಲ್ ಜಿಲ್ಲಾ ಕಾರ್ಯದರ್ಶಿ, ವೀರಣ್ಣ ಕಳ್ಳಿಮನಿ, ಮತ್ತು ಮಂಜುನಾಥ್ ಅಂಗಡಿ ಸೇರಿದಂತೆ ಜಿಲ್ಲಾ ಕಾರ್ಯಕಾರಣಿ ಸಮಿತಿ ಸದಸ್ಯರಾದ ಖುಷವೇಂದ್ರ ಸ್ವಾಮಿ ನವಲಿ ಹಿರೇಮಠ, ವಿಶ್ವನಾಥ ಬೆಳಗಳ ಮಠ್ ,ಚಂದ್ರು ಮುಕ್ಕೊಂದಿ, ರುದ್ರಪ್ಪ ಭಂಡಾರಿ ಗಂಗಾವತಿ ತಾಲೂಕ ಅಧ್ಯಕ್ಷ ನಾಗರಾಜು ಇಂಗಳಗಿ, ಕುಕನೂರ್ ತಾಲೂಕ ಅಧ್ಯಕ್ಷ ನಾಗರಾಜ್ ಬಣಕಲ್, ಕನಕಗಿರಿ ತಾಲೂಕ ಅಧ್ಯಕ್ಷ ಮಧುಸೂಧನ ರೆಡ್ಡಿ, ಕುಷ್ಟಗಿ ತಾಲೂಕ ಪ್ರಧಾನ ಕಾರ್ಯದರ್ಶಿ ಬಸವರಾಜ್ ಪಲ್ಲೆದ್ ,ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಆದರ್ಶ ದಂಪತಿಗಳ ಪುರಸ್ಕಾರಕ್ಕೆ ಗೋನಾಳ ದಂಪತಿಗಳು ಆಯ್ಕೆ

**ಕೊಪ್ಪಳ :** ಕರ್ನಾಟಕ ರಾಜ್ಯ ಸಮಾನಮನಸ್ಕರ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ಮತ್ತು ಸಮಾಜ ಸ್ಪಂದನಸೇವಾ ಒಕ್ಕೂಟ ಬೆಂಗಳೂರು ಹಾಗೂ ಕೆ.ಎಂ.ಎಚ್. ಅಭಿಮಾನಿಗಳ ಸೇವಾ ಸಮಿತಿ ದೊಡ್ಡಬಳ್ಳಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಇದೇ ಜೂನ್ 29 ಭಾನುವಾರ ದಂದು ಬೆಂಗಳೂರಿನ ಕೆ.ಎಂ. ಹೆಚ್. ಕನ್ವೆನ್ಷನ್ ಸಭಾಭವನದಲ್ಲಿ ಬೆಳಗ್ಗೆ 9:00 ರಿಂದ ಬೆಂಗಳೂರಿನ ಹಿರಿಯ ಲೇಖಕ ಮಾ.ಚಿ. ಕೃಷ್ಣರವರ ರಚಿಸಿದ "ವನಸುಮದೋಳನ್ನ ಮನ ಕುಣಿನಲಿದಾಡುತ್ತಿರೆ." ಕೃತಿ ಲೋಕಾರ್ಪಣೆ ಕಾರ್ಯಕ್ರಮ ಜರುಗಲಿದೆ.



ಕೃತಿ ಲೋಕಾರ್ಪಣೆಯನ್ನು ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಅವರು ಬಿಡುಗಡೆ ಮಾಡುವರು. ಸಮಾರಂಭದ ಅಧ್ಯಕ್ಷತೆಯನ್ನು ಕಟಿಗಾನಹಳ್ಳಿ ವಿ. ಕೃಷ್ಣಪ್ಪನವರು. ವಹಿಸಲಿದ್ದಾರೆ. ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಶ್ರೀ ಸೋಮನಾಥ ಸ್ವಾಮೀಜಿ ಆದಿಚುಂಚನಗಿರಿ ಮಠ ವಿಜಯನಗರ, ಬೆಂಗಳೂರು. ಹಾಗೂ ಶ್ರೀ ಶ್ರೀ ದಿವ್ಯಾನಂದಗಿರಿ ಸ್ವಾಮೀಜಿ ತಪಸಿಹಳ್ಳಿ ಸೇವಾಶ್ರಮ ದೊಡ್ಡಬಳ್ಳಾಪುರ ವಯಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಹುಲಿಕಲ್ ನಟರಾಜ್ ಅಧ್ಯಕ್ಷರು ವೈಜ್ಞಾನಿಕ ಪರಿಷತ್ ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯ ಮಟ್ಟದ ಹಲವಾರು ಆದರ್ಶ ದಂಪತಿಗಳನ್ನು ಗೌರವಿಸಲಾಗುತ್ತಿದೆ. ರಾಜ್ಯ ಮಟ್ಟದ ಈ ಪುರಸ್ಕಾರಕ್ಕೆ ಕೊಪ್ಪಳದ ಹಿರಿಯ ಸಾಹಿತಿ. ಸಾಹಿತ್ಯ ಸಾಮ್ರಾಟ್, ಜಿ.ಎಸ್. ಗೋನಾಳ್. ಮತ್ತು ಶ್ರೀಮತಿ ರತ್ನಮ್ಮ. ಜಿ. ಗೋನಾಳ್. ಇವರು ಆಯ್ಕೆಯಾಗಿದ್ದಾರೆ. ಜಿ. ಎಸ್. ಗೋನಾಳರ ಆದರ್ಶ ಜೀವನ ಮತ್ತು ದಾಂಪತ್ಯ ಜೀವನವನ್ನು ಗುರುತಿಸಿದ, ಹಿರಿಯ ಸಾಹಿತಿ, ಲೇಖಕ ಮಾ.ಚಿ. ಕೃಷ್ಣರವರು ಪ್ರಶಸ್ತಿ ಪುರಸ್ಕಾರಕ್ಕೆ ಕೆ.ಎಂ.ಎಚ್. ಅಭಿಮಾನಿಗಳ ಸೇವಾ ಸಮಿತಿಯಿಂದ ಆಯ್ಕೆ ಮಾಡಿದ್ದಾರೆ.

ಭಾನುವಾರ 29.6.2025. ಆದರ್ಶ ದಂಪತಿ ಪುರಸ್ಕಾರಗೊಳಲಿದ್ದಾರೆ.



**ಸಂಸದರಾದ ರಾಜಶೇಖರ ಹಿಟ್ನಾಳ ರವರು ಜಿಲ್ಲಾ ಆಸ್ಪತ್ರೆ ಕೊಪ್ಪಳ ಬೇಟಿ ನೀಡಿ, ಆಸ್ಪತ್ರೆಯ ಕುಂದುಕೊರತೆಗಳ ಬಗ್ಗೆ, ಸ್ವಚ್ಛತೆ ಬಗ್ಗೆ, ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸಿದರು ಪ್ರತಿ ವಾರ್ಡಗಳಿಗೆ, ವೈದ್ಯರ ಕೊಠಡಿಗಳಿಗೆ, ರೋಗಿಗಳನ್ನು ಬೇಟಿ ನೀಡಿ ಸರಿಯಾದ ರೀತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆಯೇ ಎಂಬುದರ ಬಗ್ಗೆ ವಿಚಾರಣೆ ಮಾಡಿದರು. ಈ ಸಂದರ್ಭದಲ್ಲಿ ಮೆಡಿಕಲ್ ಕಾಲೇಜು ನಿರ್ದೇಶಕರಾದ ವಿಜಯಾನಂದ ಇಟಗಿ, ಬಿ.ಕಲ್ಲೇಶ, ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ಮೆಡಿಕಲ್ ಕಾಲೇಜು ನಾಮ ನಿರ್ದೇಶನ ಸದಸ್ಯರಾದ ಸಲೀಂ ಅಳವಂಡಿ, ಜಿಲ್ಲಾ ಆಸ್ಪತ್ರೆ ಎಲ್ಲಾ ವಿಭಾಗದ ವೈದ್ಯಾಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.**

# ಮಳೆಗಾಗಿ ಗುರ್ಜಿ ಪೂಜೆ



**ಕುಕನೂರು :** ಪಟ್ಟಣದ ಜವಳದ ಕಾಲೋನಿಯಲ್ಲಿ ಮಳೆಗಾಗಿ ಗುರ್ಜಿ ಪೂಜೆ ಮಾಡಿ ಪ್ರಾರ್ಥಿಸಲಾಯಿತು.

ಈ ಬಾರಿ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ತಾಲ್ಲೂಕಿನ ರೈತರು ಪರಿತಪಿಸುವಂತಾಗಿದೆ. ಬೇಗನೇ ಬಾರೋ ಮಳೆರಾಯ ಎಂದು ಹಲವು ಆಚರಣೆಗಳ ಮೂಲಕ ರೈತರು ಪೂಜೆ ಸಲ್ಲಿಸುತ್ತಿದ್ದಾರೆ. ಅದರಂತೆ, ಪಟ್ಟಣದ ಜವಳದ ಕಾಲೋನಿಯಲ್ಲಿ ಮಹಿಳೆಯರು ಗುರ್ಜಿ ಪೂಜಿಸಿ ಮಳೆರಾಯನನ್ನು ಆಹ್ವಾನಿಸಿದರು.

ಜೋಳದ ರೊಟ್ಟಿ ಬೇಯಿಸುವ ಹಂಚಿನ ಮೇಲೆ ಸೆಗಣಿಯಿಂದ ತಯಾರಿಸಿದ ಗುರ್ಜಿಯನ್ನು ಒಬ್ಬ ಯುವಕನ ತಲೆ ಮೇಲೆ ಇಟ್ಟು ಮನೆ ಮನೆಗೆ ಹೋಗಿ 'ಗುರ್ಜಿ ಗುರ್ಜಿ ಎಲ್ಲಾಡಿ ಬಂದೆ.

ಹಳ್ಳಕೊಳ್ಳ ಸುತ್ತಾಡಿ ಬಂದೆ. ಕಾರ ಮಳೆಯೋ ಕಪ್ಪತ್ತ ಮಳೆಯೋ. ಸುರಿ ಸುರಿ ಸುರಿಯೋ ಮಳೆರಾಯ, ಬಣ್ಣ ಕೊಡ್ತೇನಿ ಬಾರಲೇ ಮಳೆಯೇ, ಸುಣ್ಣ ಕೊಡ್ತೇನಿ ಸುರಿಯಲೇ ಮಳೆಯೇ' ಎಂದು ಮಹಿಳೆಯರು ಹಾಡುತ್ತಿರುವ ದೃಶ್ಯ ಕಂಡುಬಂತು.

ಶಿವಪುರ್ತಪ್ಪ ಕಲಾದಗಿ, ರವಿ ಮಡಿವಾಳರ, ಜಯಲಕ್ಷ್ಮಿ ಬಿನ್ನಾಳ, ರಜಿಯಾ ಬೇಗಂ, ಮಂಜುಳಾ. ಕವಿತಾ, ಶ್ಯಾಂತವ್ವ ಇದ್ದರು.

# ಅಂಕಗಳ ಬದಲಾಗಿ ಮಾನವೀಯ ಮೌಲ್ಯ ಹೊಂದುವುದು ಮುಖ್ಯ




**ರಬಕವಿ :** ವಿದ್ಯಾರ್ಥಿ ಜೀವನದಲ್ಲಿ ಅಂಕಗಳು ಮಹತ್ವದ್ದಲ್ಲ. ಬದಲಾಗಿ ಮಾನವೀಯ ಮೌಲ್ಯಗಳ ಜೊತೆಗೆ ಯೋಗ್ಯ ಗುರಿ ತಲುಪುವದು ಮುಖ್ಯವೆಂದು ಶೇಗುಣಶಿ ವಿರಕ್ತಮಠದ ಶ್ರೀ ಮಹಾಂತಪ್ರಭು ಸ್ವಾಮೀಜಿ ಅಭಿಪ್ರಾಯಪಟ್ಟರು.

ಸಮೀಪದ ಹೊಸೂರಿನ ಹಜಾರೆ ಫೌಂಡೇಶನ್ನಿನ ಪದ್ಮಾವತಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಜರುಗಿದ ಮಿಲನ-ಪುರಸ್ಕಾರ 2025 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳೊಂದಿಗೆ ಕ್ರೀಡೆಯಲ್ಲಿ ಆಸಕ್ತಿ ತೋ-ರಿದ್ದಲ್ಲಿ ಪ್ರತಿಭಾವಂತರಾಗಲು ಸಾಧ್ಯ. ಕೇವಲ ಪುಸ್ತಕದ ಪುಟಗಳಲ್ಲಿ ಜಾಣನಾಗುವ ಬದಲು ಸಮಾಜದಲ್ಲಿ ಮಾದರಿ ವ್ಯಕ್ತಿಯಾಗಿ ಬೆಳೆಯುವದು ಅವಶ್ಯವಿದೆ ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಾಧ್ಯಕ್ಷ ಸತೀಶ ಹಜಾರೆ, ಆಡಳಿತಾಧಿಕಾರಿಣಿ ಶ್ರೀಮತಿ ಭಾರತಿ ತಾಳಿಕೋಟಿ ಹಾಗೂ ಪ್ರಾಚಾರ್ಯ ಶ್ರೀಶೈಲ ಕುಂಬಾರ, ಎಲ್ಲ ಉಪನ್ಯಾಸಕರು ಮತ್ತು ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಸತೀಶ ಬೆಳಗಲಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಅಂಕಗಳ ಬೆನ್ನಟ್ಟಿ ಹೋಗಬೇಡಿ: ರ್‍ಯಾಂಕ ವಿದ್ಯಾರ್ಥಿ ನಿಖಿಲ

**ಜಮಖಂಡಿ :** ವಿದ್ಯಾರ್ಥಿಗಳು ಅಂಕಗಳ ಬೆನ್ನಟ್ಟಿಹೋಗದೇ ಅವೆಲ್ಲ ನಿಮ್ಮ ಹಿಂದೆಯೇ ಓಡೋಡಿ ಬರುವ ರೀತಿಯಲ್ಲಿ ನೀವೆಲ್ಲರೂ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು ಎಂದು ನೀಟ್ ಪರೀಕ್ಷೆಯಲ್ಲಿ ದೇಶಕ್ಕೆ ಮತ್ತು ರಾಜ್ಯಕ್ಕೆ ಪ್ರಥಮ ರ್‍ಯಾಂಕ ಪಡೆದ ವಿದ್ಯಾರ್ಥಿ ನಿಖಿಲ ಸೊಣ್ಣದ ಹೇಳಿದರು.

ನಗರದ ರಾಯಲ್ ಪ್ಯಾಲೇಸ್ ಕಾಲೇಜಿನ ಸಭಾಭವನದಲ್ಲಿ ಶನಿವಾರ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಅಧ್ಯಯನದಲ್ಲಿ ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಿಸುವ ಕಾರ್ಯಾಗಾರದಲ್ಲಿ ಮಾತನಾಡಿದರು.




ವಿದ್ಯಾರ್ಥಿಗಳಿಗೆ ವಿಷಯಗಳು ಅರ್ಥ-ವಾಗದೇ ಇದ್ದಲ್ಲಿ ಹುಡುಕಿ ಅಧ್ಯಯನ ಮಾಡುವ ಮನಃಸ್ಥಿತಿ ವಿದ್ಯಾರ್ಥಿಗಳು ಬೆಳಸಿಕೊಳ್ಳಬೇಕು. ಕಾಲೇಜಿನ ಹಂತದಲ್ಲಿರುವ ವಿದ್ಯಾರ್ಥಿಗಳು ತನಗೆ ಎಲ್ಲವೂ ಗೊತ್ತಿದೆ ಎಂಬ ಅಹಂಕಾರ ಭಾವನೆಯನ್ನು ಹೊಂದಿರಬಾರದು. ಹೊಂದಿದರೆ ಅದು ವಿದ್ಯಾರ್ಥಿ ಜೀವನಕ್ಕೆ ಮುಳುವಾಗಲಿದೆ.

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳ ಕಲಿಕಾ ಪ್ರಮಾಣ ಹೆಚ್ಚಾಗಿರಬೇಕು.

ಕಾಲೇಜಿನ ಅಧ್ಯಯನ ಅವಧಿಯಲ್ಲಿ ನಿಯಂತ್ರಣ, ತಾಳ್ಮೆ ಬಹುಮುಖ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಆಸಕ್ತಿ ಮತ್ತು ಶಿಸ್ತು ಮತ್ತಷ್ಟು ಗಟ್ಟಿಗೊಳಿಸುತ್ತದೆ ಎಂದರು.

ಡಾ. ಸಿದ್ದು ಸೊಣ್ಣದ ಮಾತನಾಡಿ, ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಿಕೊಂಡರೆ ಮಾತ್ರ ಯಶಸ್ಸು ಪಡೆಯಲು ಸಾಧ್ಯ. ಮಕ್ಕಳ ಸಾಧನೆಗಾಗಿ ತಂದೆ-ತಾಯಿ ಪೂರ್ಣಾವಧಿ ಶಿಕ್ಷಕರಾಗಬೇಕು. ಮಕ್ಕಳ ಬೆಳವಣಿಗೆ ಕೂಡ ಶಿಕ್ಷಣದ ಮೇಲೆ ಪರಿಣಾಮವನ್ನು ಬೀರಲಿದೆ. ಮಕ್ಕಳ ಶಿಕ್ಷಣ ಕೆಳಮಟ್ಟದಲ್ಲಿಯೇ ಗಟ್ಟಿಯಾಗಿರಬೇಕು. ವಿದ್ಯೆ ಅರಿತುಕೊಂಡ ವಿದ್ಯಾರ್ಥಿಗಳ ಜೀವನಮಟ್ಟ ಸುಧಾರಣೆಯಾಗಲಿದೆ. ಎಲ್ಲ ಗಿಡಮರಗಳು ಹೂವುಗಳನ್ನು ಬಿಡುತ್ತವೆ.

ಕೆಲವೊಂದು ಗಿಡ ಮರಗಳು ಹೂವು ಬಿಡದೇ, ಬಿಟ್ಟರೂ ಅವು ಅರಳದೇ ಧರೆಗೆ ಬೀಳುತ್ತವೆ.

ಕೆಲವೊಂದು ಅರಳುವ ಮೂಲಕ ಸುವಾಸನೆ ಬೀರುತ್ತವೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಂಸ್ಥೆ ಅಧ್ಯಕ್ಷ, ಮಾಜಿ ಶಾಸಕ ಆನಂದ ನ್ಯಾಮಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ನೀಟ್ ಪರೀಕ್ಷೆಗೆದೇಶದಲ್ಲಿಅಂದಾಜು22.09 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅದರಲ್ಲಿ ವಿಜಯಪುರದ ವಿದ್ಯಾರ್ಥಿ ನಿಖಿಲ ಸೊಣ್ಣದ ರಾಜ್ಯಕ್ಕೆ ಮತ್ತು ದೇಶಕ್ಕೆ ಪ್ರಥಮ ರ್‍ಯಾಂಕ ಪಡೆದುಕೊಂಡಿದ್ದಾರೆ. ಅವರನ್ನು ಕರೆಯಿಸಿ ನಮ್ಮ ಕಾಲೇಜಿನ ವತಿಯಿಂದ ಸನ್ಮಾನಿಸುತ್ತಿರುವುದು ಹೆಮ್ಮೆಯ ಸಂಗತಿ. ಛಲ ಮತ್ತು ಮನಸ್ಸಿನ ಏಕಾಗ್ರತೆ ಹೊಂದಿರುವ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಲಿದ್ದಾರೆ.

ಕೌಶಲ್ಯ, ಶಿಸ್ತು , ದೃಢ ನಿರ್ಧಾರಗಳು ವಿದ್ಯಾರ್ಥಿಗಳ ಜೀವನ ಶೈಲಿಯನ್ನು ಗಟ್ಟಿಗೊಳಿಸುತ್ತದೆ. ಕಲಿಯುವ ಮನೋಭಾವನೆ ಇದ್ದರೆ ಸಾಧಿಸಲು ಸಾಕಷ್ಟು ಅವಕಾಶಗಳಿವೆ ಎಂದರು.

ವೇದಿಕೆಯಲ್ಲಿ ಸಂಸ್ಥೆ ಆಡಳಿತಾಧಿಕಾರಿ ಬಸವರಾಜ ನ್ಯಾಮಗೌಡ, ಸುಮಿತ್ರಾ ನ್ಯಾಮಗೌಡ, ಬಸವರಾಜ ಸೊಣ್ಣದ, ಡಾ. ಸಂಗು ನ್ಯಾಮಗೌಡ, ಲಕ್ಷ್ಮಣ ಶಿರೋಳ, ಪ್ರಾಚಾರ್ಯ ಎನ್. ಎಂ. ರೊಳ್ಳಿ, ಪ್ರಾಚಾರ್ಯೆ ರೀತಾ ಜೈನರ ಸಹಿತ ಹಲವರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ಮತ್ತು ವಿಷಯ ಶಿಕ್ಷಕ-ರಿಗೆ ಹೂಗುಚ್ಛ ನೀಡಿ ಸ್ವಾಗತಿಸಲಾಯಿತು. ವಿದ್ಯಾರ್ಥಿನಿ ಕುಮಾರಿ ಸ್ವಾತಿ ಸ್ವಾಗತಿಸಿದರು. ಕುಮಾರಿ ರಶ್ಮಿ ಸೊಗಸಾಗಿ ನಿರೂಪಿಸಿದರು. ಕುಮಾರಿ ರಾಧಿಕಾ ವಂದಿಸಿದರು.

# ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಂಡ 'ಅಂಧ'ದಾನಿ



**ಬನಹಟ್ಟಿ :** ಇಲ್ಲೊಬ್ಬ ಅಂಧ ವ್ಯಕ್ತಿ ದಿನಂಪ್ರತಿ ಬಸ್ ನಿಲ್ದಾಣಕ್ಕೆ ಬಂದಾಗ ತನಗೆ ಬಸ್ಗಳ ಫಲಕ ವೀಕ್ಷಣೆ ಸಾಧ್ಯವಾಗದ ಕಾರಣ ಸಾರಿಗೆ ನಿಯಂತ್ರಕರಿಗೊಂದು ಧ್ವನಿವರ್ಧಕ ಕೊಡುಗೆಯನ್ನಾಗಿ ನೀಡುವ ಮೂಲಕ ತನ್ನ ಜೊತೆಗೆ ಇತರ ಪ್ರಯಾಣಿಕರಿಗೂ ಕೂಡ ಅನುಕೂಲ ಮಾಡಿಕೊಟ್ಟಿದ್ದಾರೆ.

ಬನಹಟ್ಟಿಯಮಾಹೇಶ್ವರಿಸಮಾಜದಜವಾಹರಲಾಲ್ (ಗೋಟು) ಡಾಗಾ ಧ್ವನಿವರ್ಧಕ ಸೆಟ್ ನೀಡಿದ ದಾನಿಯಾಗಿದ್ದಾರೆ.

ಬಸ್ಗಳಲ್ಲಿ ಸಂಚರಿಸುವಾಗ ನಿತ್ಯ ಬನಹಟ್ಟಿ ಬಸ್ ನಿಲ್ದಾಣದಲ್ಲಿ ಸಮರ್ಪಕವಾಗಿ ಫಲಕಗಳನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ನಿಲ್ದಾಣದೊಳಗೆ ಧ್ವನಿವರ್ಧಕದ ಅವಶ್ಯಕತೆಯೂ ಇತ್ತು. ಇದನ್ನರಿತ ಡಾಗಾ ಅವರು ಸ್ವಯಂಪ್ರೇರಿತವಾಗಿ ಧ್ವನಿವರ್ಧಕ ಒದಗಿಸಿ ಮಾನವೀಯ ಮೌಲ್ಯಕ್ಕೆ ಸಾಕ್ಷಿಯಾದ್ದ-ರಿಂದ ಸಾರಿಗೆ ಇಲಾಖೆಯು ವತಿಯಿಂದ ಅವರನ್ನು ಗೌರವಿಸಿ ಸನ್ಮಾನಪತ್ರ ನೀಡಿದರು.

ಸದರಿ ದಾನಿಯು ಪ್ರತಿ ವರ್ಷ ಸರ್ಕಾರಿ ಹಾಗು ಖಾಸಗಿ ಶಾಲೆಗಳಲ್ಲಿ ಲಕ್ಷಾಂತರ ರೂ.ಗಳ ವೆಚ್ಚದಲ್ಲಿಯ ಝುರಾಕ್ಸ ಮೆಷಿನ್, ಶುದ್ಧ ಕುಡಿಯುವ ನೀರು, ಡೆಸ್ಕ್ ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ಒದಗಿಸುವ ಮೂಲಕ ಶಿಕ್ಷಣ ಪ್ರೇಮಿಯಾಗಿಯೂ ಬಡ ವಿದ್ಯಾರ್ಥಿಗಳು ಬೆಳೆಯುವಲ್ಲಿ ಡಾಗಾ ಕಾರಣ-ರಾಗಿದ್ದಾರೆ.

ಈ ಸಂದರ್ಭದಲ್ಲಿ ಲೀಲಾಬಾಯಿ ಝುಂವರ, ಶಶಿಕಲಾ ಮಂತ್ರಿ, ಶಾಲಿನಿ ಭಂಗ, ಸಾರಿಗೆ ನಿಯಂತ್ರಕರಾದ ಆನಂದ ಮೈಗೂರ, ಜಿ. ಎಸ್. ಮರನೂರ, ಹಾರೂನ್ ಬಂಡೇಬುರುಜ, ಗೋಪಾಲ ಡಾಗಾ, ಶರ್ಮಾ, ಪತ್ರಕರ್ತ ಮಲ್ಲು ತುಂಗಳ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ತುರ್ತು ಪರಿಸ್ಥಿತಿ; ಇತಿಹಾಸದಲ್ಲಿ ಕಗ್ಗತ್ತಲೆಯ ದಿನ: ಕುಳಗೇರಿ

**ಜಮಖಂಡಿ :** ತುರ್ತು ಪರಿಸ್ಥಿತಿಯು ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವಾಗಿದೆ ಎಂದು ಎಬಿವಿಪಿ ಸಂಘಟನೆಯ ರಾಜ್ಯ ಕಾರ್ಯದರ್ಶಿ ಸಚಿನ ಕುಳಗೇರಿ ಹೇಳಿದರು.

ನಗರದ ಸಾಯಿನಿಕೇತನ ಕಾಲೇಜಿನ ಸಭಾಭವನದಲ್ಲಿ ಎಬಿವಿಪಿ ಸಂಘಟನೆ ಹಮ್ಮಿಕೊಂಡಿದ್ದ "ತುರ್ತು ಪರಿಸ್ಥಿತಿಗೆ ಐವತ್ತು ವರ್ಷ" ಕರಾಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಕಾನೂನು ಬಾಹಿರವಾಗಿ ನಾಗರಿಕ ಹಕ್ಕುಗಳನ್ನು ಹತ್ತಿಕ್ಕಿದ್ದಲ್ಲದೆ, ಅಭಿವ್ಯಕ್ತಿ ಸ್ವಾತಂತ್ರ್ಯ, ನ್ಯಾಯಾಂಗದ ಸ್ವಾಯತ್ತತೆ ಮತ್ತು ಪತ್ರಿಕಾ ಸ್ವಾತಂತ್ರ್ಯದ ಮೇಲೆ ತೀವ್ರವಾಗಿ ದಾಳಿ ಮಾಡಿದರು. ಆಗಿನ ಕಾಂಗ್ರೆಸ್ ಸರ್ಕಾರದ ಅಧಿಕಾರದ ಲಾಲಸೆಯು ಸಂವಿಧಾನದ ಮಾನದಂಡಗಳನ್ನು ಗಾಳಿಗೆ ತೂರಿ, ದೇಶಕ್ಕೆ ಸರ್ವಾಧಿಕಾರಿ ಆಡಳಿತ ನೀಡಿದ ಅವಧಿಯಾಗಿದೆ ಎಂದರು.




ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಆನಂದಿಸುತ್ತಿರುವಾಗ, ಆ ದುರಂತದಿಂದ ಪಾಠ ಕಲಿಯುವುದು ಅವಶ್ಯಕ. ಅದು ದೇಶದ ಆತ್ಮವನ್ನು ಗಾಯಗೊಳಿಸುವುದಲ್ಲದೆ, ಲಕ್ಷಾಂತರ ನಾಗರಿಕರ ನೈತಿಕತೆಯನ್ನು ಛಿದ್ರಗೊಳಿಸಿತು.

ನಾಗರಿಕ ಹಕ್ಕುಗಳು ಹತ್ತಿಕ್ಕಲ್ಪಟ್ಟು ಸಾವಿರಾರು ಅಮಾಯಕರು ವಿಚಾರಣೆಯೇ ಇಲ್ಲದೆ ಬಂಧಿಗಳಾದರು. ಪೋಲಿಸ್ ಕ್ರೌರ್ಯಕ್ಕೆ ಅನೇಕರು ತಮ್ಮ ಜೀವ ಕಳೆದುಕೊಂಡರು ಎಂದರು.

ತುರ್ತು ಪರಿಸ್ಥಿತಿ ಮೂಲಕ ಸರ್ವಾಧಿಕಾ-ರಿಯ ಕೈಯಲ್ಲಿ ದೇಶದ ಪ್ರಜಾಪ್ರಭುತ್ವ, ನ್ಯಾಯಾಂಗ ವ್ಯವಸ್ಥೆ, ಚುನಾವಣಾ ವ್ಯವಸ್ಥೆ, ಮಾಧ್ಯಮಗಳು ಸಿಲುಕಿ ನಲುಗಿ ಹೋದವು. ಸಮಸ್ತ ಭಾರತೀಯರ ಆತ್ಮವಾದ ಸಂವಿಧಾನದ ಮೇಲೆ ನಡೆದ ಸಂಘಟಿ-ತ ದಾಳಿ ಪ್ರಜಾಪ್ರಭುತ್ವದ ಸಾರ್ವಕಾಲಿಕ ಆಶಯಗಳನ್ನು ದುರ್ಬಲಗೊಳಿಸುವ ಉದ್ದೇಶವಾಗಿತ್ತು. ಕೇವಲ ತಾನು ಅಧಿಕಾರದಲ್ಲಿ ಉಳಿಯಬೇಕು ಎನ್ನುವ ಒಂದೇ ಒಂದು ಕಾರಣಕ್ಕಾಗಿ ಪ್ರಜಾಪ್ರಭುತ್ವದ ಎಲ್ಲ ಮೌಲ್ಯಗಳನ್ನು ಗಾಳಿಗೆ ತೂರಿ ಇಡೀ ದೇಶವನ್ನು ಜೈಲುನಂತೆ ಪರಿವರ್ತಿಸಲಾಗಿತ್ತು. ಅಂದಿನ ಆಡಳಿತದ ಈ ದಬ್ಬಾಳಿಕೆಯನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಸರ್ಕಾರವನ್ನು ವಿಮರ್ಶಿಸಲು ಅವಕಾಶವೇ ಇರಲಿಲ್ಲ. ಬಿನ್ನಾಭಿಪ್ರಾಯ ವ್ಯಕ್ತಪಡಿಸಿದವರನ್ನೆಲ್ಲಾ ದಮನಿಸಲಾಗುತ್ತಿತ್ತು. ಕೆಲವೇ ಕೆಲವು ರಾಷ್ಟ್ರ ಭಕ್ತರು ಹೋರಾಟದ ಮೂಲಕ ಪ್ರಜಾಪ್ರಭುತ್ವದ ಆಶಯ ಉಸಿರಾಡುವಂತೆ ಪ್ರಯತ್ನಿಸಿದರೂ, ಸರ್ವಾಧಿಕಾರದ ಬಲಾಢ್ಯ ಹಸ್ತಗಳು ನಿಗ್ರಹಕಾರಿಯಾಗಿ ಅಂಥವರನ್ನು ಸದೆ ಬಡಿಯುವ ಕೆಲಸ ಮಾಡುತ್ತಿತ್ತು ಎಂದರು.

ಎಬಿವಿಪಿ ಸಂಘಟನೆ ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯ ಮಲ್ಲಿಕಾರ್ಜುನ ಮಾಳಿ ಮಾತನಾಡಿ, ವಿಶ್ವದ ಅತೀ ಹೆಚ್ಚು ಸದಸ್ಯರನ್ನು ಒಳಗೊಂಡ ಸಂಘಟನೆ ಎಬಿವಿಪಿ. ದೇಶದ ಕಾಲೇಜು ಕ್ಯಾಂಪಸ್ ಗಳಲ್ಲಿ ದೇಶದ ಪರ ವಿಚಾರವನ್ನು ಬಿತ್ತುವ ಕೆಲಸದಲ್ಲಿ ತೊಡಗಿಕೊಂಡಿದೆ ಎಂದರು.

ಪ್ರಾಚಾರ್ಯ ರೋಷನಿ ವೇರ್ಣಕರ, ಎಬಿವಿಪಿ ನಗರ ಕಾರ್ಯದರ್ಶಿ ಪರಶುರಾಮ ಜಿಟ್ಟಿ, ಸಾಗರ ಉಪಾಧ್ಯಾಯ, ರಾಕೇಶ ಗುರವ, ಶಿಕ್ರು ನ್ಯಾಮಗೊಂಡ ಸಹಿತ ಹಲವರು ಉಪಸ್ಥಿತರಿದ್ದರು.

# ವಿವಿಧ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಶಾಸಕ: ಜೆ.ಟಿ. ಪಾಟೀಲ್

**ಕಲಾದಗಿ :** ಬೀಳಗಿ ವಿಧಾನಸಭಾ ಮತಕ್ಷೇತ್ರದ ಶಿಕ್ಷಣ ಇಲಾಖೆಗೆ ಮಂಜೂರಾದ 10 ಕೋಟಿ ವಿಶೇಷ ಅನುದಾನದಲ್ಲಿ.

ಅಡಿಯಲ್ಲಿ ಗ್ರಾಮದ ಸರ್ಕಾರಿ ಉರ್ದು ಪ್ರೌಢ ಶಾಲೆಯಲ್ಲಿ 16 ಲಕ್ಷ 40 ಸಾವಿರ ವೆಚ್ಚದ ನೂತನ ಕೊಠಡಿ ನಿರ್ಮಾಣದ ಕಾಮಗಾರಿಗೆ ಹಾಗೂ ಸಮೀಪದ ಕಜ್ಜಿ ದೋಣಿ ಗ್ರಾಮದ ಸರಕಾರಿ ಗಂಡು ಮಕ್ಕಳ ಮಾದರಿ ಶಾಲೆಯಲ್ಲಿ 13 ಲಕ್ಷ 90 ಸಾವಿರದ ವೆಚ್ಚದ ನೂತನ ಕೊಠಡಿ ನಿರ್ಮಾಣದ ಕಾಮಗಾರಿಗೆ ಶಾಸಕ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ ಟಿ ಪಾಟೀಲ್ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಸಂಶಿ ಕ್ರಾಸ್ ಬಳಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಾಣವಾದ ಬಸ್ ನಿಲ್ದಾಣವನ್ನು ಉದ್ಘಾಟಿಸಿದರು.



ಕಲಾದಗಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕೆ ಎಚ್ ರೋಣ. ಉಪಾಧ್ಯಕ್ಷ ಪಕೀರಪ್ಪ ಮಾದರ. ಸೈಯದ್ ಫೈಯಾಜ್ ಅಹ್ಮದ್ ಖಾಜಿ. ಅಂಜುಮನ ಅಧ್ಯಕ್ಷ ರಫೀಕ ಸಾಬ ಬೇಪಾರಿ. ಗ್ರಾಂಪಂ ಸದಸ್ಯರಾದ ಬಾಬು ತೇಲಿ.ಮುನ್ನಾ ಕಲಾಸಿ. ಶ್ಯಾಮ್ ಕಾಳೆ. ಬಂದೇ ನವಾಜ ಮನಿಯರ. ಅರ್ಜುನ ಮಾದರ. ಪಂಚ ಗ್ಯಾರಂಟಿ ಯೋಜನೆಯ ಪ್ರಾಧಿಕಾರದ ಜಿಲ್ಲಾಧ್ಯಕ್ಷ ತೆಕ್ಕೆನ್ನವರ. ಮುಖಂಡರಾದ ಬಂದೇ ನವಾಜ ಸೌದಾಗರ. ಸಲೀಂ ಶೇಖ. ಹಸನ ಅಹಮ್ಮದ ರೋಣ. ಅಂಜಲಿ ಬಾನು. ರಮೇಶ ಮಾದರ. ಮಲ್ಲಪ್ಪ ಜಮಖಂಡಿ. ಅಕ್ರಂ ಸೌದಾಗರ. ಪಂಚಾಯತ್ ರಾಜ್ ಇಂಜಿನಿಯರ ವಿಭಾಗದ ಅಧಿಕಾರಿಗಳು. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿ ಎಲ್ ಹವಾಲ್ದಾರ. ಸೇರಿದಂತೆ ಇತರರು ಇದ್ದರು.

ಜುಲೈ 2 ರಂದು ಕಳಸಕೊಪ್ಪ ಕೆರೆ ತುಂಬುವ ಕಾರ್ಯಕ್ಕೆ ಚಾಲನೆ

ಈ ಭಾಗದ ಐತಿಹಾಸಿಕ ಕಳಸಕೊಪ್ಪ ಕೆರೆಗೆ ಪ್ರಸ್ತುತ ವರ್ಷದ ನೀರು ತುಂಬುವ ಕಾರ್ಯಕ್ಕೆ ಜು. 2ರಂದು ಚಾಲನೆ ನೀಡಲಾಗುವುದು ಎಂದು ಶಾಸಕ ಜೆ ಟಿ ಪಾಟೀಲ್ ಸುದ್ದಿಗಾರರಿಗೆ ತಿಳಿಸಿದರು.

# ವಿವಿಧ ಇಲಾಖೆಗಳಿಂದ 106 ಕೋಟಿ ರೂ. ಬಾಕಿ: ಎಂ.ಸಿ.ಎ. ಅಧ್ಯಕ್ಷ ಸತೀಶ್ ಸೈಲ್

**ಮಂಗಳೂರು :** ಲೋಕೋಪಯೋಗಿ, ನಗರ ಪಾಲಿಕೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಿಂದ ಜಾಹಿರಾತು ಬಾಬ್ತು 106 ಕೋಟಿ ರೂ.ಗೂ ಅಧಿಕ ಮೊತ್ತ ಬರಬೇಕಾಗಿದೆ ಎಂದು ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ನಿಗಮದ ಅಧ್ಯಕ್ಷ, ಕಾರವಾರ ಶಾಸಕ ಸತೀಶ್ ಸೈಲ್ ಹೇಳಿದ್ದಾರೆ.

ಅವರು ಶುಕ್ರವಾರ ಮಂಗಳೂರಿನ ಯೆಯ್ಯಾಡಿಯಲ್ಲಿ ಕೆಎಸ್‌ಎಂಸಿಎ ಸ್ಥಳಾಂತರಿತ ಮಂಗಳೂರು ಶಾಖೆಯ ಉದ್ಘಾಟನೆ ನೆರವೇರಿಸಿ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ (ಐಎನ್‌ಎಸ್) ನಿಯಮ ಪ್ರಕಾರ ಸರ್ಕಾರಿ ಜಾಹಿರಾತುಗಳನ್ನು ಪತ್ರಿಕೆಗಳಿಗೆ ನೀಡಿದ ಅರವತ್ತು ದಿನಗಳಲ್ಲಿ ಕೆಎಸ್‌ಎಂಸಿಎ ಬಿಲ್ ಪಾವತಿಸುತ್ತದೆ. ಆದರೆ ಕೆಎಸ್‌ಎಂಸಿಎ ಬಳಿಕ ಅದನ್ನು ಸರ್ಕಾರದಿಂದ ಪಡೆಯುವುದು ಕ್ರಮ. 2022 ರಿಂದ ವಸೂಲಿಗೆ ಬಾಕಿ ಮೊತ್ತ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ. ಇಲ್ಲಿಯವರೆಗೆ 106 ಕೋಟಿ ರೂ.ಗೂ ಅಧಿಕ ಮೊತ್ತ ಬರಬೇಕಾಗಿದೆ. ಮೊತ್ತ ಬಾಕಿ ಇರಿಸಿರುವ ಇಲಾಖೆಗಳಿಂದ ಪಾವತಿಗೆ ಕ್ರಮ ಕೈಗೊಳ್ಳುವಂತೆ ಕೋರಿ ಜಿಲ್ಲಾಧಿಕಾರಿಗಳು, ಸಹಾಯಕ ಕಮಿಷನರ್ಗಳಿಗೆ ಪತ್ರ ಮೂಲಕ ಕೋರಲಾಗಿದೆ ಎಂದರು.

ಮಾಧ್ಯಮಗಳಿಗೆ ಸರ್ಕಾರದ ಇಲಾಖೆಗಳು ನೀಡುವ ಜಾಹಿರಾತು ಮೊತ್ತದಲ್ಲಿ ಶೇ.15 ರಷ್ಟುಕಮಿಷನ್ನು ಕೆಎಸ್‌ಎಂಸಿಎ ಪಡೆದುಕೊಳ್ಳುತ್ತದೆ. ಪತ್ರಿಕೆಗಳಿಗೆ ಪ್ರಯೋಜನವಾಗುವ ಸಲುವಾಗಿ ಈ ಕಮಿಷನ್ (ಏಜೆಂಟ್ ಚಾರ್ಜ್) ಮೊತ್ತವನ್ನು ಶೇ.10ಕ್ಕೆ ಇಳಿಸುವ ಬಗ್ಗೆ ಚಿಂತಿಸಲಾಗುತ್ತಿದೆ ಎಂದರು.

ಜಾಹಿರಾತು ಮತ್ತು ಈವೆಂಟ್ಗಳನ್ನು ಕೆಎಸ್‌ಎಂಸಿಎ ಆಯೋಜಿಸುತ್ತಿದೆ. ಈವೆಂಟ್ ಆಯೋಜನೆಯಲ್ಲಿ 4ಉ ವಿನಾಯ್ತಿಯನ್ನು 25 ಲಕ್ಷ ರೂ. ನಿಂದ 200 ಲಕ್ಷ ರೂ.ಗೆ ವಿಸ್ತರಿಸಲಾಗಿದೆ. ವಿವಿಧ ಸ್ಟಾರ್ಟ್‌ಅಪ್ ಗಳ ವೃತ್ತಿಪರರ ಜೊತೆ ಹಾಗೂ ವಿವಿಧ ಕಂಪನಿಗಳು, ಎಂಎಸ್‌ಎಂಇ, ಬ್ಯಾಂಕ್ಗಳು, ಪಿಎಸ್ಯುಗಳು, ಗ್ರಾಹಕರೊಂದಿಗೆ ಚರ್ಚಿಸಲಾಗುತ್ತಿದೆ. ಇವುಗಳ ಜೊತೆ ಸಂಪರ್ಕ ಸೇತುವೆಯಾಗಿ ಹಾಗೂ ತಂತ್ರಜ್ಞಾನ ಪ್ಲಾಟ್ಫಾರಂ ಆಗಿ ಕೆಎಸ್‌ಎಂಸಿಎ ವೇದಿಕೆ ಒದಗಿಸುತ್ತದೆ ಎಂದರು.

17 ಕೋಟಿ ರೂ. ಲಾಭ:

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀನದಲ್ಲಿ 1972 ರಲ್ಲಿ ಕೆಎಸ್‌ಎಂಸಿಎ ಅಸ್ತಿತ್ವಕ್ಕೆ ಬಂದಿದೆ. 2002 ರಲ್ಲಿ ಹುಬ್ಬಳ್ಳಿಯಲ್ಲಿ ತನ್ನ ಪ್ರಥಮ ಶಾಖೆ ಆರಂಭಿಸಿದ್ದು, ಪ್ರಸ್ತುತ ರಾಜ್ಯದಲ್ಲಿ ಹದಿನೈದು ಶಾಖೆ ಹಾಗೂ ಮುಂಬೈ, ದೆಹಲಿಯಲ್ಲಿ ಶಾಖೆಗಳು ಕಾರ್ಯ ನಿರ್ವಹಿಸುತ್ತಿವೆ. 2023–24 ರಲ್ಲಿ 412.12 ಕೋಟಿರು. ವಹಿವಾಟು ನಡೆಸಲಾಗಿದ್ದು , 2024–25 ನೇ 431.81 ಕೋಟಿರು. ವಹಿವಾಟು ನಡೆಸಿದೆ. ಕಳೆದ ಸಾಲಿನಲ್ಲಿ 17 ಕೋಟಿ ರೂ. ಲಾಭ ಗಳಿಸಿದೆ ಎಂದರು. ಕಳೆದ ಐದು ವರ್ಷಗಳಲ್ಲಿ ಸಿಎಸ್‌ಆರ್ ನಿಧಿಯಡಿ 285.37 ಲಕ್ಷ ರೂ. ವೆಚ್ಚ ಮಾಡಿದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ವಾರ್ಷಿಕ ತಲಾ ಒಂದು ಕೋಟಿ ರೂ. ದೇಣಿಗೆ ನೀಡಿದೆ. ಪ್ರಸಕ್ತ ಸಾಲಿನಲ್ಲಿ ಕಂಪನಿಯ ಲಾಭದಲ್ಲಿ 5.28 ಕೋಟಿ ರೂ.ಗಳ ಲಾಭಾಂಶವನ್ನು ಸರ್ಕಾರಕ್ಕೆ ಸಂದಾಯ ಮಾಡಲಾಗಿದೆ. ವಿಶೇಷ ಲಾಭಾಂಶ ಮೂರು ಕೋಟಿ ರೂ. ನೀಡಲು ಉದ್ದೇಶಿಸಲಾಗಿದೆ ಎಂದರು.

ಎಂಸಿಎ ಭವನ ನಿರ್ಮಾಣ: ಸಂಸ್ಥೆಗೆ ವಿವಿಧ ಜಿಲ್ಲೆಗಳಲ್ಲಿ ಹಂಚಿಕೆ, ನೋಂದಣಿಯಾಗಿರುವ ಹನ್ನೆರಡು ನಿವೇಶನಗಳಲ್ಲಿ ಎಂಸಿಎ ಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಈ ಸಂಸ್ಥೆಗೆ ಕೆಐಎಡಿಬಿಯಿಂದ ಬೆಂಗಳೂರಿನಲ್ಲಿ ಹಂಚಿಕೆಯಾಗಿರುವ ಒಂದು ಎಕರೆ ಕೈಗಾರಿಕಾ ಭೂಮಿಯಲ್ಲಿ ಮುದ್ರಣ ಮತ್ತು ಐಟಿ, ಐಟಿಇಎಸ್ ಚಟುವಟಿಕೆಯ ಕಾರ್ಯ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದರು. ಮಂಗಳೂರು ಶಾಖೆ 2009 ರಲ್ಲಿ ಸ್ಥಾಪನೆಯಾಗಿದ್ದು, ಕಾವೂರಿನಲ್ಲಿಇಲ್ಲಿನಪ್ರಥಮಶಾಖೆಆರಂಭಿಸಲಾಗುತ್ತಿದೆ ಎಂದರು. ಸಂಸ್ಥೆಯ ಎಂ.ಡಿ. ಮೊಹಮ್ಮದ್ ಅತಿಕುಲ್ಲಾ ಶರೀಫ್, ಡಿಜಿಎಂ ನಂದೀಶ್, ಶಾಖಾ ಪ್ರಬಂಧಕ ರಾಘವೇಂದ್ರ ಶಾಸ್ತ್ರಿ, ವಿಶೇಷ ಅಧಿಕಾರಿ ಅನುರಾಧ ಇದ್ದರು.

# ವೀರಯೋಧ ರಫಿ ಪಿಂಜಾರ ಅವರಿಗೆ ಅದ್ದೂರಿ ಸ್ವಾಗತ ಕೋರಿದ ಗ್ರಾಮಸ್ಥರು



**ಇಳಕಲ್ :** ತಾಲೂಕಿನ ಕೊಡಿಹಾಳ ಗ್ರಾಮದ ವೀರಯೋಧ ರಫಿ ಪಿಂಜಾರ ಅವರು 20 ವರ್ಷ ಭಾರತೀಯ ಸೇನೆಯಲ್ಲಿ ವೀರ ಯೋಧರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಶನಿವಾರದಂದು ಅವರ ಹುಟ್ಟೂರು ಕೊಡಿಹಾಳ ಗ್ರಾಮಕ್ಕೆ ಆಗಮಿಸಿದಾಗ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕೊಡಿಹಾಳ ಹಾಗೂ ಸುತ್ತಮುತ್ತಲಿನ ಗ್ರಾಮದ ಗ್ರಾಮಸ್ಥರು, ಸ್ನೇಹಿತರ ಬಳಗ, ವೀರ ಯೋಧನ ಕುಟುಂಬಸ್ಥರು ಉಪಸ್ಥಿತರಿದ್ದರು.

**ವರದಿ:ಸೈಯದ್ ಸಿರಾಜ್ ಖಾಜಿ**

# ಪೊಲೀಸ್ ಠಾಣೆಯಲ್ಲಿ ಮೊಹರಂ ಹಬ್ಬದ ನಿಮಿತ್ಯ ಶಾಂತಿ ಸಭೆ

**ಇಲಕಲ್ :** ಮೊಹರಂ ಹಬ್ಬದ ನಿಮಿತ್ತ ಇಳಕಲ್ ನಗರದ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ ನಡೆಯಿತು.

ನಗರ ಠಾಣೆ ಪಿಎಸ್‌ಐ ಎಸ್.ಆರ್. ನಾಯಕ್ ಮಾತನಾಡಿ ಶಾಂತ ರೀತಿಯಿಂದ ಎಲ್ಲರೂ ಮೊಹರಂ ಹಬ್ಬವನ್ನು ಆಚರಿಸಬೇಕು. ಮೊಹರಂ ಹಬ್ಬ ಹಿಂದು ಮುಸ್ಲಿಂ ಭಾವೈಕ್ಯತೆಯ ಹಬ್ಬವಾಗಿದೆ ಎಂದು ಹೇಳಿದರು.

ಈ ಶಾಂತಿ ಸಭೆಯಲ್ಲಿ ನಗರದ ಹಿರಿಯರು, ಹಿಂದೂ ಮುಸ್ಲಿಂ ಸಮಾಜ ಬಾಂಧವರು ಉಪಸ್ಥಿತರಿದ್ದರು.

**ವರದಿ: ಸೈಯದ್ ಸಿರಾಜ್ ಖಾಜಿ**



# ವಿದ್ಯುತ್ ಚಾಲಿತ ವಾಹನಗಳಿಗೆ ಪಿಎಂ ಇ–ಡ್ರೈವ್ ಯೋಜನೆ ವರದಾನ

**ಬೆಂಗಳೂರು :** ಪ್ರಧಾನಮಂತ್ರಿ ಶ್ರೀ ನರೇಂದ್ರಮೋದಿನೇತೃತ್ವದಕೇಂದ್ರ ಸರ್ಕಾರವು 11 ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಸಚಿವಾಲಯದ ವತಿಯಿಂದ ಮೂರು ದಿನಗಳ ಕಾಲ ಮಾಧ್ಯಮ ಪ್ರವಾಸ ಆಯೋಜಿಸಲಾಗಿತ್ತು. ಪತ್ರಕರ್ತರು ಮೂರು ದಿನಗಳ ಕಾಲ ವಿವಿಧ ಕೈಗಾರಿಕೆಗಳಿಗೆ ಭೇಟಿ ನೀಡಿ ಕೇಂದ್ರ ಸರ್ಕಾರವು ಬೃಹತ್ ಕೈಗಾರಿಕಾ ಕ್ಷೇತ್ರದಲ್ಲಿ ತೆಗೆದುಕೊಂಡ ನೀತಿ, ನಿರ್ಣಯಗಳ ಕುರಿತು ಮಾಹಿತಿ ಪಡೆದುಕೊಂಡರು.



ಪ್ರವಾಸದ ಅಂಗವಾಗಿ ಇಂದು (27 ಜೂನ್, 2025) ಮಾಧ್ಯಮ ನಿಯೋಗ ಬಿಡದಿಯಲ್ಲಿರುವ ಟೊಯೊಟಾ ಕಿರ್ಲೋಸ್ಕರ್ ಆಟೋ ಪಾರ್ಟ್ಸ್ ಪ್ರೈ.ಲಿ. ಗೆ ಭೇಟಿ ನೀಡಿತು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ವಿದ್ಯುತ್ ಚಾಲಿತ ವಾಹನಗಳ ಪ್ರಯೋಜನ ತಿಳಿಸುವ 'ಪಿಎಂ ಇ–ಡ್ರೈವ್' ಹಾಗೂ ಉತ್ಪನ್ನಗಳ ಮೇಲೆ ಹೂಡಿಕೆಗಳನ್ನು ಆಕರ್ಷಿಸುವ 'ಪ್ರೊಡಕ್ಟ್ ಲಿಂಕಡ್ ಇನ್ವೆಸ್ಟಮೆಂಟ್' (ಪಿಎಲ್ಐ) ಯೋಜನೆಗಳ ಕುರಿತು ಮಾಧ್ಯಮ ನಿಯೋಗ ವಿಸ್ತೃತವಾದ ಮಾಹಿತಿ ಪಡೆದುಕೊಂಡಿತು. ಟೊಯೊಟಾ ಕಿರ್ಲೋಸ್ಕರ್ ಆಟೋ ಪಾರ್ಟ್ಸ್ ಪ್ರೈ.ಲಿ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೆ.ಎನ್. ಪ್ರಸಾದ್ ಹಾಗೂ ಕಂಪನಿಯ ದೇಶದ ಮುಖ್ಯಸ್ಥ (ಕಂಟ್ರಿ ಹೆಡ್) ಹಾಗೂ ಕಾರ್ಯನಿರ್ವಾಹಕ ಉಪಾಧ್ಯಕ್ಷ ಶ್ರೀ ವಿಕ್ರಮ್ ಗುಲಾಟಿ ಅವರು ಮಾಧ್ಯಮ ನಿಯೋಗಕ್ಕೆ ಅಭಿವೃದ್ಧಿ ಕಾರ್ಯಗಳ ಕುರಿತು ಮಾಹಿತಿ ನೀಡಿದರು.

# ಸಾವಯವ ಕೃಷಿಯಿಂದ ಪರಿಸರ ಮತ್ತು ಸಮಾಜಕ್ಕೆ ಉತ್ತಮ ಕೊಡುಗೆ

**ಮೂಡಲಗಿ :** 'ರೈತರು ಸಾವಯವ ಪದ್ದತಿಯಲ್ಲಿ ಕಬ್ಬು ಬೆಳೆಯುವುದರಿಂದ ಪರಿಸರ ಮತ್ತು ಸಮಾಜಕ್ಕೆ ಬಹು ದೊಡ್ಡ ಕೊಡುಗೆಯಾಗುತ್ತದೆ' ಎಂದು ಸಮೀರವಾಡಿಸಕ್ಕರೆಕಾರ್ಖಾನೆಯ ಮಾಲಿಕ (ಸಿಎಂಡಿ) ಸಮೀರ ಸೋಮೈಯಾ ಹೇಳಿದರು.

ಅವರು ಇತ್ತೀಚೆಗೆ ಮೂಡಲಗಿಯ ಪ್ರಗತಿಪರ ರೈತರಾದ ಬಾಳಪ್ಪ ಬಿ. ಬೆಳಕೂಡ ಅವರ ತೋಟಕ್ಕೆ ಭೆಟ್ಟಿ ನೀಡಿ ಕಬ್ಬಿನ ಬೆಳೆಯಲ್ಲಿ ಮಾಡಿರುವ ಸಾಧನೆಯನ್ನು ವೀಕ್ಷಿಸಿ ಮಾತನಾಡಿದರು.

ಕೃಷಿಯು ಪರಿಸರಕ್ಕೆ ಹಾನಿಯಾಗದಂತೆ ರೈತರು ಕಾಳಜಿ ವಹಿಸುವುದು ಇಂದಿನ ಅವಶ್ಯಕತೆ ಇದೆ ಎಂದರು.



ಕಲ್ಲೋಳ್ಳಿಯ ರೈತ ಬಾಳಪ್ಪ ಬಿ. ಬೆಳಕೂಡ ಅವರು ಕಬ್ಬು ಬೆಳೆಯಲ್ಲಿ ಅತ್ಯುತ್ತಮ ಇಳುವರಿ ಮಾಡುತ್ತಿರುವುದು ಶ್ಲಾಘನೀಯವಾಗಿದೆ.

ಈ ಹಿಂದೆ ಎಕರೆಗೆ 125 ಟನ್ ಇಳುವರಿ ಪಡೆದು ದಾಖಲೆ ಮಾಡಿದ್ದರು. ಈ ಬಾರಿ ಎಕರೆಗೆ 140 ಟನ್ ಇಳುವರಿ ತೆಗೆಯುವ ಅವರ ಗುರಿ ಮತ್ತು ಅವರ ಶ್ರಮವು ನಿಜವಾಗಿಯೂ ಮೆಚ್ಚುವಂತಹದ್ದು ಎಂದರು.

ರೈತ ಬಾಳಪ್ಪ ಬೆಳಕೂಡ ಅವರ ತೋಟದಲ್ಲಿ ಎರೆಹುಳ ಗೊಬ್ಬರ ತೊಟ್ಟಿಗಳು, ಬಯೋ ಡೈಜಿಸ್ಟಿಕ, ದೇಸಿ ಆಕಳು, ಎಮ್ಮೆಗಳ ಕೊಟ್ಟಿಗೆ, ಜೀವಾಮೃತ ತಯಾರಿಕೆ ಘಟಕ ಇವುಗಳನ್ನು ಸಮೀರ ಸೋಮೈಯಾ ಅವರು ವೀಕ್ಷಿಸಿದರು.

ಬೆಳಕೂಡ ಅವರು ನೈಸರ್ಗಿಕ ಸಂಗತಿಗಳನ್ನು ಬಳಸಿ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆಯುತ್ತಿರುವ ಕೃಷಿ ಪದ್ಧತಿಯು ಮಾದರಿಯಾಗಿದೆ. ರೈತರು ಇಂಥ ಪದ್ಧತಿಯನ್ನು ಅನುಸರಿಸಿ ಕೃಷಿಯಲ್ಲಿ ಮುಂದೆ ಬರಬೇಕು ಎಂದರು.

ಮಾಧವ ಸಮೀರ ಸೋಮೈಯಾ, ಡಾ. ಲ್ಯಾರಿ ವಾಕರ್, ಡಾ. ಲೀಸಾ, ಸಮೀರವಾಡಿ ಗೋದಾವರಿ ಬೈಯೋ ರಿಫೈನರಿ ಸಕ್ಕರೆ ಕಾರ್ಯನಿರ್ವಾಹಕ ನಿರ್ದೇಶಕಿ ಸಂಗೀತಾ ಶ್ರೀವಾತ್ಸವ, ಕಾರ್ಯನಿರ್ವಾಹಕ ನಿರ್ದೇಶಕ ಬಾಲಚಂದ್ರ ಭಕ್ಷಿ, ಕೆಐಎಎಆರ್ ವಿಭಾಗದ ನಿರ್ದೇಶಕ ಡಾ. ನಂದಕುಮಾರ, ಕಬ್ಬು ವಿಭಾಗದ ಮಹಾ ಪ್ರಬಂಧಕ ವಿ. ಎಸ್. ಕಣಬೂರ, ವಿಶ್ವನಾಥ ಭುಜನ್ನವರ, ಸಂದೀಪನ, ಅಶೋಕ ಕುಡಚಿ, ರವಿ ಖಾನಗೌಡ್ರ, ತಾಲ್ಲೂಕು ಕೃಷಿಕ ಸಮಾಜ ಅಧ್ಯಕ್ಷ ಅಶೋಕ ಗದಾಡಿ, ಶಂಕರ ಬೆಳಕೂಡ, ಬಸವರಾಜ ಬೆಳಕೂಡ, ಪ್ರಭು ಕಡಾಡಿ, ಚಿದಾನಂದ ಕುಂದನವರ, ರಾಜು ಕಡಾಲಗಿ, ಭೀಮಶಿ ಹೆಬ್ಬಾಳ, ಮಲ್ಲಪ್ಪ ಕುರಬೇಟ, ಉಮೇಶ ಪಾಟೀಲ, ಈರಣ್ಣ ಬೆಳಕೂಡ ಮತ್ತು ರೈತರು ಉಪಸ್ಥಿತರಿದ್ದರು.

# ರೈತರ ಪಂಪಸೆಟ್ ಕೇಬಲ್ ಕಳ್ಳತನ

**ತೇರದಾಳ :** ಕೃಷ್ಣಾ ನದಿ ತೀರದ ತಮದಡ್ಡಿ ಹಾಗೂ ಹಳಿಂಗಳಿ ಗ್ರಾಮಗಳಲ್ಲಿ ರೈತರ ಪಂಪಸೆಟ್ಗಳ ಕೇಬಲ್ ಕಳ್ಳತನ ಮುಂದುವರೆದಿದ್ದು, ತಮದಡ್ಡಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನದಿ ದಡದಲ್ಲಿ ರೈತರು ಅಳವಡಿಸಿರುವ ಪಂಪಸೆಟ್ ಕೇಬಲ್ ಕಳ್ಳತನ ಮಾಡಿಕೊಂಡು ಹೋಗಿರುವ ಘಟನೆ ನಡೆದಿದೆ.

ಈ ಮೊದಲು ಹಳಿಂಗಳಿ ಗ್ರಾಮದಲ್ಲಿ ಎರಡು ಬಾರಿ ಹಾಗೂ ತಮದಡ್ಡಿ ಗ್ರಾಮದಲ್ಲಿ ಒಂದು ಬಾರಿ ಹತ್ತಾರು ರೈತರ ಕೇಬಲ್ ಕಳ್ಳತನ ಮಾಡಲಾಗಿತ್ತು. ಇದರಿಂದ ಲಕ್ಷಾಂತರ ರೂಪಾಯಿ ರೈತರಿಗೆ ನಷ್ಟ ಸಂಭವಿಸಿತ್ತು. ಈಗ ಮತ್ತೆ ತಮದಡ್ಡಿ ಗ್ರಾಮದಲ್ಲಿ ಐದಾರು ರೈತರ ಕೇಬಲ್ ಕಳ್ಳತನ ಮಾಡಲಾಗಿದೆ.

ಕೃಷ್ಣಾ ನದಿ ತುಂಬಿ ಹರಿಯುತ್ತಿದ್ದು, ತೆಪ್ಪದಲ್ಲಿ ಬೇರೆ ಜಿಲ್ಲೆಯಗ್ರಾಮದಿಂದಕಳ್ಳರುಆಗಮಿಸಿಕೇಬಲ್‌ಕಳ್ಳತನ ಮಾಡಿಕೊಂಡು ಹೋಗುತ್ತಿದ್ದಾರೆಂದು ಗ್ರಾಮಸ್ಥರು ಶಂಕಿಸಿದ್ದಾರೆ. ಕೇಬಲ್ ಕಳ್ಳತನವಾದಾಗಲೆಲ್ಲ ಈ ಕುರಿತು ಸ್ಥಳೀಯ ಪೊಲೀಸ್ ಠಾಣಗೆ ರೈತರು ಫಿಯಾ9ದಿ ನೀಡಿದ್ದಾರೆ. ಆದರೆ ಇದುವರೆಗೆ ಯಾವುದೇ ಪ್ರಯೋಜನವಾಗಿಲ್ಲ. ಇನ್ನು ಕೇಬಲ್ ಕಳ್ಳತನ ಮಾಡುವ ಖದೀಮರು ಕೇಬಲ್ನ್ನು ನದಿ ದಡದಲ್ಲಿಯೇ ಸುಟ್ಟು ಅದರಲ್ಲಿನ ತಾಮ್ರವನ್ನು ಮಾತ್ರ ತೆಗೆದುಕೊಂಡು ಹೋಗುವ ಮೂಲಕ ಅದನ್ನು ಹೊತ್ತೊಯ್ಯುವ ಭಾರವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ. ಕೆಲ ಸಂದರ್ಭದಲ್ಲಿ ರೈತರ ಕೇಬಲ್ ಜತೆಗೆ ಮೋಟಾರಗಳನ್ನು ಕೂಡ ಕಳವು ಮಾಡಿರುವಉದಾಹರಣೆಗಳಿವೆ.ನಾಲ್ಕುಬಾರಿಕೇಬಲ್ ಕಳವು ಆಗಿದ್ದರೂ ಸಹ ಪೊಲೀಸರು ಆರೋಪಿಗಳನ್ನು ಪತ್ತೆ ಮಾಡುವಲ್ಲಿ ವಿಫಲವಾಗಿರುವುದಕ್ಕೆ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

**ನದಿ ತೀರದ ಗ್ರಾಮಗಳಲ್ಲಿ ಕೇಬಲ್ ಕಳ್ಳತನವಾಗಿರುವ ಬಗ್ಗೆ ಮಾಹಿತಿ ಬಂದಿದೆ. ನಾನು ಈಗಷ್ಟೇ ಹೊಸದಾಗಿ ತೇರದಾಳ ಪೋಲೀಸ್ ಠಾಣೆಗೆ ವರ್ಗವಾಗಿ ಬಂದಿದ್ದೇನೆ. ಕೇಬಲ್ ಕಳ್ಳತನ ಮಾಡಿರುವ ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಿ ಕ್ರಮ ಕೈಗೊಳ್ಳಲಾಗುವುದು.**

**। ಎಸ್.ಕೆ. ಸಿಂಗನ್ನವರ ಪಿಎಸ್‌ಐ, ತೇರದಾಳ.**

# ಮಕ್ಕಳು ರಾಷ್ಟ್ರದ ಉತ್ತಮ ನಾಗರಿಕರಾಗಬೇಕು

**ರಬಕವಿ :** ಮಕ್ಕಳು ಮಾದಕ ವಸ್ತುಗಳ ದಾಸರಾಗದೆ ರಾಷ್ಟ್ರದ ಉತ್ತಮ ನಾಗರಿಕರಾಗಬೇಕು. ಮುಗ್ಧ ಮನಸ್ಸಿನ ಮಕ್ಕಳು ಮಾದಕ ದ್ರವ್ಯಗಳ ದಾಸರಾಗದೆ ಜ್ಞಾನಾರ್ಜನೆಯತ್ತ ಮಾತ್ರ ಗಮನ ನೀಡಬೇಕು ಎಂದು ಬನಹಟ್ಟಿ ಪೋಲಿಸ್ ಠಾಣೆಯ ಪಿ.ಎಸ್.ಐ. ಶಾಂತಾ ಎನ್. ಹಳ್ಳಿ ಹೇಳಿದರು.

ಸಮೀಪದ ಯರಗಟ್ಟಿಯ ಸರಕಾರಿ ಮಾದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ವಿಶ್ವ ಮಾದಕ ದ್ರವ್ಯ ವ್ಯಸನ ಮುಕ್ತ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮಾದಕ ವಸ್ತುಗಳಾದ ತಂಬಾಕು, ಗಾಂಜಾ, ಅಫೀಮು, ಗುಟ್ಕಾ, ಸಿಗರೇಟ್ ಹಾಗೂ ಮದ್ಯದಂತಹ ವಸ್ತುಗಳನ್ನು ಶಾಲೆಯ ಸುತ್ತಲೂ ಒಂದು ನೂರು ಮೀಟರ್ ಅಂತರದ ಒಳಗೆ ಮಾರಾಟ ಮಾಡುವುದು ಅಪರಾಧವಾಗಿದೆ ಎಂದರು.

ಕೊಟ್ಪಾ ಕಾಯ್ದೆ ಕುರಿತು ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಯ ಸುತ್ತಮುತ್ತ ತಂಬಾಕು ಹಾಗೂ ಅದರ ಉತ್ಪನ್ನಗಳನ್ನು ಮಾರಾಟ ಮಾಡುವವರ ಮೇಲೆ ದಂಡ ಹಾಕುವ ಹಾಗೂ ಕಾನೂನು ಕ್ರಮ ಜರುಗಿಸುವ ಅಧಿಕಾರ ನೀಡಿದೆ ಎಂದು ಹೇಳಿದರು. ಅಕ್ರಮ ಮಾದಕ ದ್ರವ್ಯಗಳ ಮಾರಾಟದ ಬಗ್ಗೆ ಮಾಹಿತಿ ಇದ್ದರೆ, ಪೋಲಿಸ್ ಸಹಾಯವಾಣಿ 112 ಕ್ಕೆ ಕರೆ ಮಾಡಲು ಸಲಹೆ ನೀಡಿದರು. ಅಪ್ರಾಪ್ತ ವಯಸ್ಸಿನಲ್ಲಿ ಮಾದಕ ದ್ರವ್ಯಗಳ ವ್ಯಸನಿಗಳಾದರೆ ಮಕ್ಕಳ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದರು. ಇದರಿಂದ ಮಕ್ಕಳ ಬೆಳವಣಿಗೆ ಕುಂಠಿತಗೊಳ್ಳುವುದಲ್ಲದೇ ಕುಟುಂಬದಸ್ವಾಸ್ಥ್ಯ ಹಾಳಾಗುತ್ತದೆ. ಮಾದಕ ವ್ಯಸನಿಗಳು ಸಮಾಜದ ಆರೋಗ್ಯವನ್ನು ಹಾಳು ಮಾಡುತ್ತಾರೆ. ಮಕ್ಕಳು ಒಳ್ಳೆಯ ಸಂಸ್ಕಾರವಂತರಾಗಬೇಕು ಹಾಗೂ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಹದಿಹರೆಯದ ಹೆಣ್ಣು ಮಕ್ಕಳು ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ ಧೈರ್ಯದಿಂದ ಕಂದಾಚಾರಗಳನ್ನು ಎದುರಿಸಬೇಕು. ಅವರ ವಿರುದ್ಧ ನಡೆಯುವ ಅನ್ಯಾಯಗಳಿಗೆ ಬಲಿಯಾಗದೆ ಪೋಲಿಸ್ ಹಾಗೂ ಕಾನೂನಿನ ನೆರವು ಪಡೆಯಬೇಕೆಂದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರೌಢ ಶಾಲೆಯ ಸಹ ಶಿಕ್ಷಕ ಉತ್ತಮಕುಮಾರ ಮಗದುಮ್, ಶಾಲೆಯಲ್ಲಿ ಈಗಾಗಲೇ ಮಾದಕ ವಸ್ತು ಬಳಕೆ ನಿಷೇಧ ಸಮಿತಿ ರಚನೆಯಾಗಿದ್ದು ಮಕ್ಕಳಿಗೆ ಸೂಕ್ತ ತಿಳುವಳಿಕೆ ನೀಡುತ್ತಿದೆ. ಶಾಲೆಯ ಸುತ್ತಮುತ್ತಲಿನ ಅಂಗಡಿಗಳಲ್ಲಿ ಮಾದಕ ದ್ರವ್ಯಗಳನ್ನು ಮಾರಾಟ ಮಾಡದಂತೆ ತಿಳುವಳಿಕೆ ನೀಡಲಾಗಿದೆ ಎಂದರು.

ಮಕ್ಕಳಿಗೆ ಪ್ರತಿಜ್ಞಾ ವಿಧಿ ಬೋಧನೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪೋಲಿಸ್ ಸಿಬ್ಬಂದಿ ಹಾಗೂ ಶಾಲೆಯ ಎಲ್ಲ ಶಿಕ್ಷಕ ವರ್ಗದವರು ಭಾಗವಹಿಸಿದ್ದರು.

ಶಿಕ್ಷಕ ಭರತೇಶ ಲೋಕಾಪೂರ ಕಾರ್ಯಕ್ರಮ ನಿರೂಪಿಸಿದರು. ಮುಖ್ಯ ಗುರುಮಾತೆ ಚಿತ್ರಭಾನುಕೋಟಿ ಸರ್ವರನ್ನೂ ಸ್ವಾಗತಿಸಿದರು. ರವೀಂದ್ರ ಡುಮ್ಮಿ ವಂದಿಸಿದರು.

ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ನದಾಫ್, ಎಸ್.ಡಿ.ಎಮ್.ಸಿ.ಯ ಅಧ್ಯಕ್ಷ ಮಹಾದೇವ ಸನದಿ, ಬಸಪ್ಪ ಕಂಕಣವಾಡಿ, ಗ್ರಾಮ ಪಂಚಾಯತ ಸದಸ್ಯರು ಹಾಜರಿದ್ದರು.

# ಕೆ.ಎಲ್.ಇ. ಬಿ.ಸಿ.ಎ. ವಿಭಾಗಕ್ಕೆ ನೂರಕ್ಕೆ ನೂರು ಫಲಿತಾಂಶ

**ಮಹಾಲಿಂಗಪುರ :** ಸ್ಥಳೀಯ ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಹಾಗೂ ಡಿ.ಡಿ.ಎಸ್. ವಾಣಿಜ್ಯ ಮಹಾವಿದ್ಯಾಲಯದ ಬಿ.ಸಿ.ಎ. ಆರನೇ ಸೆಮಿಸ್ಟರನ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ಒಟ್ಟು 33 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅತ್ಯುತ್ತಮ ಮಾದರಿ ಹಾಗೂ ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ.



ಒಟ್ಟು ಕಾಲೇಜಿನ ಫಲಿತಾಂಶ ಶೇ. ನೂರಕ್ಕೆ ನೂರರಷ್ಟಾಗಿದೆ. ಪವನಕುಮಾರ ಗೊಂಧಳಿ (ಎಸ್.ಜಿ.ಪಿ.ಎ. 9.71– ಪ್ರಥಮ), ನಂದಿನಿ ಗಸ್ತಿ (ಎಸ್.ಜಿ.ಪಿ.ಎ. 9.56– ದ್ವಿತೀಯ), ಹರ್ಷಿತಾ ಫಕಿರಪುರ (ಎಸ್.ಜಿ.ಪಿ.ಎ. 9.52– ತೃತೀಯ) ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಚಾರ್ಯ ಡಾ. ಕೆ. ಎಂ. ಅವರಾದಿ, ಬಿಸಿಎ ವಿಭಾಗದ ಮುಖ್ಯಸ್ಥ ಎಸ್. ಆಯ್. ಪಾಟೀಲ ಹಾಗೂ ಸಂಸ್ಥೆಯ ಸ್ಥಳಿಯ ಆಡಳಿತ ಮಂಡಳಿಯ ಸದಸ್ಯರು, ಉಪನ್ಯಾಸಕರು ಹಾದಿ9ಕವಾಗಿ ಅಭಿನಂದಿಸಿದ್ದಾರೆ.

# ವಕೀಲರ ಸಂಘಕ್ಕೆ ಅವಿರೋಧ ಆಯ್ಕೆ

**ರಬಕವಿ–ಬನಹಟ್ಟಿ :** ವಕೀಲರ ಸಂಘದ ಚುನಾವಣೆಯಲ್ಲಿ ಶನಿವಾರ ಕಾರ್ಯದರ್ಶಿಯಾಗಿ ರವೀಂದ್ರ ಸಂಪಗಾಂವಿ ಹಾಗು ಜಂಟಿ ಕಾರ್ಯದರ್ಶಿಯಾಗಿ ರಮೇಶ ಸರಿಕರ ಅವಿರೋಧವಾಗಿ ಆಯ್ಕೆಗೊಂಡರು.



# ಮಾದಕ ದ್ರವ್ಯ ವ್ಯಸನ ಮುಕ್ತ ದಿನಾಚರಣೆ: ಪ್ರತಿಜ್ಞಾವಿಧಿ




**ಮಹಾಲಿಂಗಪುರ :** ಸ್ಥಳೀಯ ಸರಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಮಾದಕ ದ್ರವ್ಯ ವ್ಯಸನ ಮುಕ್ತ ದಿನಾಚರಣೆ ಆಚರಿಸಲಾಯಿತು.

ಮಹಾಲಿಂಗಪುರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್ಐ ಮಧು ಎಲ್. ಅವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿ, ಮಾದಕ ವ್ಯಸನ,ರಸ್ತೆಸುರಕ್ಷತಾ ನಿಯಮಗಳು,ಸೈಬರ್ ವಂಚನೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್. ಎಲ್. ಜೋಡಟ್ಟಿ, ಸಿಬಿಸಿ ಕಮಿಟಿ ಅಧ್ಯಕ್ಷ ಮಹೇಶ ಜಿಡ್ಡಿಮನಿ, ಪ್ರೌಢ ಶಾಲೆಯ ಮುಖ್ಯಗುರು ಡಿ. ಬಿ. ಕುಲಕರ್ಣಿ,ಶಿಕ್ಷಕರು,ಉಪನ್ಯಾಸಕರು,ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಮಯವನ್ನು ನಾವು ಪಾಲಿಸಬೇಕು



**ರಬಕವಿ-ಬನಹಟ್ಟಿ :** ತಂದೆ, ತಾಯಿ, ಶಿಕ್ಷಕರೇ ನಿಜವಾದ ದೇವರು. ಸಾಧಕ ವಿದ್ಯಾರ್ಥಿಗಳು ನಮಗೆ ಪ್ರೇರಣೆಯಾಗಬೇಕು. ನಮ್ಮಲ್ಲಿ ನಮ್ಮ ಬಗ್ಗೆ ಕೀಳರಿಮೆ ಇರಬಾರದು. ಉತ್ತಮ ಪುಸ್ತಕ, ಉತ್ತಮ ಗೆಳೆಯರು ಮತ್ತು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಸಮಯವನ್ನು ನಾವು ಪಾಲಿಸಬೇಕು ಎಂದು ಬಾಗಲಕೋಟೆ ಜಿಲ್ಲೆಯ ಶಾಲಾ ಶಿಕ್ಷಣ ( ಪದವಿ ಪೂರ್ವ) ಇಲಾಖೆಯ ನೂತನ ಉಪನಿರ್ದೇಶಕ ಪುಂಡಲೀಕ ಕಾಂಬಳೆ ತಿಳಿಸಿದರು.

ಅವರು ಶನಿವಾರ ಇಲ್ಲಿನ ಎಸ್. ಆರ್. ಎ. ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿ-ಕೆಗಳ ಉದ್ಘಾಟನೆ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಜ್ಞಾನವೇ ನಿಜವಾದ ಶಕ್ತಿಯಾಗಿದೆ.

ವಿದ್ಯಾರ್ಥಿಗಳು ಸತತ ಅಧ್ಯಯನ, ಪ್ರಯತ್ನ, ದೃಢತೆಯಿಂದ ಸಾಧನೆಯನ್ನು ಮಾಡಬಹುದಾಗಿದೆ. ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸಿ ಉತ್ತಮ ಸ್ಥಾನವನ್ನು ಪಡೆದುಕೊಳ್ಳಬೇಕು ಎಂದು ಕಾಂಬಳೆ ತಿಳಿಸಿದರು.

ಜನತಾ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕ ಭೀಮಶಿ ಮಗದುಮ್ ಮಾತನಾಡಿ, ವಿದ್ಯಾರ್ಥಿಗಳು ಉತ್ತಮವಾಗಿ ಅಧ್ಯಯನ ಮಾಡುವುದರ ಜೊತೆಗೆ ತಾವು ಕಲಿತ ಕಾಲೇಜಿಗೆ, ತಂದೆ ತಾಯಿ ಮತ್ತು ಶಿಕ್ಷಕರಿಗೆ ಉತ್ತಮ ಹೆಸರನ್ನು ತಂದು ಕೊಡುವ ಕಾರ್ಯ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪ್ರಾಚಾರ್ಯ ಬಿ. ಆರ್. ಗೊಡ್ಡಾಳೆ, ಮಹಾದೇವ ಗುಟ್ಲಿ, ಎಸ್. ಎಸ್. ಖಾನಾಪುರ, ಎಫ್. ಬಿ. ತಳವಾರ, ಶಿಲ್ಪಾ ಅಗಡಿ ಮಾತನಾಡಿದರು.

ಜನತಾ ಶಿಕ್ಷಣ ಸಂಘದ ಅಧ್ಯಕ್ಷ ಬಸವರಾಜ ಭದ್ರನವರ, ಕಾರ್ಯಾಧ್ಯಕ್ಷ ಬಸವರಾಜ ಜಾಡಗೌಡ ಆಡಳಿತ ಮಂಡಳಿಯ ಸದಸ್ಯರು, ಶಂಕರ ಸೊಲ್ಲಾಪುರ, ಬಸವರಾಜ ಕೊಣ್ಣೂರ, ಕೆ. ಎಚ್. ಸಿನ್ನೂರ, ಬಿ. ನಾಗರಾಜ, ಶಿವಕುಮಾರ ಬಿರಾದಾರ ಪಾಟೀಲ, ಎಸ್. ಕೆ. ನಡುವಿನಕೇರಿ, ಮೀನಾಕ್ಷಿ ಮಿರ್ಜಿ, ಸಿ. ಎಸ್. ಚಾಂಗ್ಲೇರ್, ವಾಣಿ ಆಚನೂರ, ಎಂ. ಎಸ್. ಒಂಟಗುಡಿ ಉಪಸ್ಥಿತರಿದ್ದರು.

# ಮಕ್ಕಳ ಹಕ್ಕುಗಳಿಗೆ ಧ್ವನಿಯಾಗುವ ಶಾಲಾ ಸಂಸತ್ ಚುನಾವಣೆ

**ರಬಕವಿ-ಬನಹಟ್ಟಿ :** ತಾಲೂಕಿನ ನಾವಲಗಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢ ವಿಭಾಗದಲ್ಲಿ ಶನಿವಾರ ಸಂಭ್ರಮವೋ ಸಂಭ್ರಮ, ಶಾಲೆಯಲ್ಲಿ ಮಕ್ಕಳಿಗೆ 2025-26 ನೇ ಸಾಲಿನ ಸಂಸತ್ ಚುನಾವಣೆ. ಚುನಾವಣೆ ಅಂದರೆ ಶಾಲೆಗೆ ರಜೆಯೇನಿಲ್ಲ. ಇಲ್ಲಿ ಮಕ್ಕಳೆ ಸ್ಪರ್ಧಾಳುಗಳು. ಮಕ್ಕಳೆ ಮತ ಚಲಾಯಿಸುವವರು. ಅತೀ ಉತ್ಸುಕತೆಯಿಂದ ಮಕ್ಕಳು ಮತದಾನ ಮಾಡಲು ಸರತಿ ಸಾಲಿನಲ್ಲಿ ನಿಂತು ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಲು ಕಾತುರರಾಗಿ ನಿಂತಿರುವ ದೃಶ್ಯ ಕಂಡು ಬಂತು.

ಇಡೀ ಶಾಲಾ ವಾತಾವರಣ ಚುನಾವಣೆ ಪ್ರಕ್ರಿಯೆಯಲ್ಲಿ ಮುಳುಗಿತ್ತು.

ಮತದಾನಮಾಡಲುಎಸ್ಡಿಎಂಸಿಯವರುಆಗಮಿಸಿದ್ದು ವಿಶೇಷವಾಗಿತ್ತು. ಮತದಾನ ಮಾಡಿದ ನಂತರ ಕೆಪಿ-ಎಸ್ ಉಪಾಧ್ಯಕ್ಷಬಸವರಾಜಗಣಿ ಮಾತನಾಡಿ ಶಾಲಾ ಸಂಸತ್ ಚುನಾವಣೆ ಮಕ್ಕಳ ಹಕ್ಕುಗಳ ಧ್ವನಿಯಾಗಿದೆ. ಜೊತೆಗೆ ಮಕ್ಕಳಿಗೆ ಚುನಾವಣೆಯ ಬಗ್ಗೆ ಅರಿವು ಮೂಡಿಸುವ ಒಂದು ಒಳ್ಳೆಯ ಉದ್ದೇಶ ಶಾಲಾ ಸಂಸತ್ ಚುನಾವಣೆಯ ಮಹತ್ವದ ಕಾರ್ಯವಾಗಿದೆ. ಮಕ್ಕಳು ಕಲಿಕೆಯ ಜೊತೆ ಜೊತೆಗೆ ಪ್ರಜಾಪ್ರಭುತ್ವದ ಮೂಲಾಂಶಗಳನ್ನು ಬೆಳೆಸಿದರೆ ಭವಿಷ್ಯದಲ್ಲಿ ಉತ್ತಮ ನಾಗರಿಕರನ್ನು ದೇಶಕ್ಕೆ ಕಾಣಿಕೆಯಾಗಿ ನೀಡಬಹುದು. ಈ ಹಿನ್ನೆಲೆಯಲ್ಲಿ ಮಕ್ಕಳ ಸಂಸತ್ತು ಬಹಳ ಮಹತ್ವ ಪಡೆದಿದೆ. ಶಾಲೆಯ ಪ್ರತಿಯೊಂದು ಚಟುವಟಿ-ಕೆ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆಗೆ ಅನುಕೂಲವಾಗುವ ದೃಷ್ಟಿಯಿಂದ ಸಂಸತ್ತು ಚುನಾವಣೆ ಜರುಗಿದ್ದು ನಿಜಕ್ಕೂ ಮೆಚ್ಚುವಂತಹದ್ದು ಎಂದರು.

ಈ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳು ಚುನಾವಣೆ ಸಿಬ್ಬಂದಿ, ಪೋಲಿಸ್ ಹಾಗೂ ಪತ್ರಕರ್ತರಾಗಿ ಕರ್ತವ್ಯ ನಿರ್ವಹಿಸಿದ್ದು ವಿಶೇಷವಾಗಿತ್ತು.

ಸದಸ್ಯರಾದ ಗಂಗಪ್ಪ ಅಮ್ಮಲಜೇರಿ, ಈರಪ್ಪ ಕಡಕಬಾವಿ, ಕಾಡೇಶ ಕಂಪು, ಶಿಕ್ಷಕರಾದ ಸದಾಶಿವ ಮೇತ್ರಿ, ಪರಶುರಾಮ ನಾಟಿಕಾರ, ಮಹಾಂತೇಶ ಖವಟಕೊಪ್ಪ, ಎ.ಎಂ.ನದಾಫ, ಹಣಮಂತ ಹಾಲಳ್ಳಿ, ಶ್ರೀಶೈಲ ಗುರವ, ಲಕ್ಷ್ಮೀ ಮೋಟಗಿ, ಸಾವಿತ್ರಿ ಬೆನಕನಳ್ಳಿ, ದೌಲತ್ತಬಿ ಜಮಖಂಡಿ ಸೇರಿದಂತೆ ಅನೇಕರು ಹಾಜರಿದ್ದರು.

# ನಾಟಕ ಕಲೆಯನ್ನು ಉಳಿಸಿ ಬೆಳೆಸಿ



**ರಬಕವಿ-ಬನಹಟ್ಟಿ :** ನಮ್ಮಿಂದ ದೂರವಾಗುತ್ತಿರುವ ನಾಟಕ ಕಲೆ ಮತ್ತು ಕಲಾವಿದರನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪ್ರೋತ್ಸಾಹಿಸಬೇಕು ಎಂದು ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಬಸವೇಶ್ವರ ಸಮುದಾಯ ಭವನದಲ್ಲಿ ಗೆಳೆಯರ ಬಳಗ ಬನಹಟ್ಟಿ ಮತ್ತು ಗಂಗಾವತಿ ರೇಷ್ಮೆ ರಂಗೋತ್ಸವ ಆಶ್ರಯದಲ್ಲಿ ನಡೆದ ಯಶವಂತ ಸರದೇಶಪಾಂಡೆ ಅವರು ರಚಿಸಿದ 'ಅಮರ ಮಧುರ ಪ್ರೇಮ' ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದರು.

ನಟ, ನಿರ್ದೇಶಕ ಯಶವಂತ ಸರದೇಶಪಾಂಡೆ ಮಾತನಾಡಿ, ಪ್ರೇಕ್ಷಕರಿಗೆ ಉತ್ತಮ ಕಥಾ ವಸ್ತುವಿನ ನಾಟಕಗಳನ್ನು ನೀಡಿದರೆ ಅವರು ನಾಟಕಗಳನ್ನು ಅವಶ್ಯವಾಗಿ ನೋಡುತ್ತಾರೆ. ಆದಾಗ್ಯೂ ನಾಟಕಗಳ ಪ್ರದರ್ಶನ ಇಂದಿನ ದಿನಗಳಲ್ಲಿ ಕಡಿಮೆಯಾಗುತ್ತಿವೆ ಎಂದರು.

ತೇರದಾಳದ ಡಾ. ಮಹಾವೀರ ದಾನಿಗೊಂಡ ಮಾತನಾಡಿ, ಇಂಥ ಕಾರ್ಯಕ್ರಮಗಳನ್ನು ಸಂಘಟನೆ ಮಾಡುವುದುಕಷ್ಟ.ಕಾರ್ಯಕ್ರಮಗಳನ್ನುಆಯೋಜನೆ ಮಾಡುವ ಸಂಘಟಕರನ್ನು ನಾವು ಪ್ರೋತ್ಸಾಹಿಸಬೇಕು ಎಂದರು.

ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ಕಾರ್ಯಕ್ರಮ ಉದ್ಘಾಟಿಸಿದರು. ನಗರದ ಬಿಜೆಪಿ ಮುಖಂಡ ಧರೆಪ್ಪ ಉಳ್ಳಾಗಡ್ಡಿ ಅಧ್ಯಕ್ಷತೆ ವಹಿಸಿದ್ದರು. ಯಶವಂತ ಸರದೇಶಪಾಂಡೆ, ಸುಂದರ ವೀಣಾ ಮತ್ತು ವೀಣಾ ಸುಂದರ ನಾಟಕ ಪ್ರದರ್ಶನ ಮಾಡಿದರು.

ಬನಹಟ್ಟಿಹಿರೇಮಠದಶರಣಬಸವಶಿವಾಚಾರ್ಯರು, ಪಿ. ಬಿ. ಬಡಿಗೇರ,

ಈಶ್ವರ ಬಿದರಿ, ಜಿ. ಎಂ. ಪಾಟೀಲ, ವಿನಾಯಕ ತಾಂಬಟ, ಗೋಪಾಲ ಭಟ್ಟಡ, ಪ್ರಕಾಶ ಹೋಳಗಿ, ಮನೋಹರ ಸುಟ್ಟಟ್ಟಿ, ಮಾಧ್ವಾನಂದ ಗುಟ್ಲಿ, ಕಿರಣ ಆಳಗಿ, ಚಿದಾನಂದ ಸೊಲ್ಲಾಪುರ, ಅರವಿಂದ ಪತ್ತಾರ, ಡಾ. ರವಿ ಜಮಖಂಡಿ,

ಮಲ್ಲಿಕಾರ್ಜುನ ಗಡೆನ್ನವರ, ವಿಜಯಕುಮಾರ ಹಲಕುರ್ಕಿ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವಜ ಕಾಡದೇವರ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಆರೋಗ್ಯದ ಮಹತ್ವ ಅರಿಯಬೇಕು: ಡಾ. ಗಿರಡ್ಡಿ



**ಜಮಖಂಡಿ :** ಆರೋಗ್ಯ ಸರಿಯಾಗಿದ್ದಾಗ ಅದರ ಮಹತ್ವ ಅರಿಯಬೇಕು. ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯವನ್ನು ಹದಗೆಡಿಸಿಕೊಂಡ ಬಳಿಕ ಮರಳಿ ಆರೋಗ್ಯ ಪಡೆಯಲಾಗದೆ ಪಶ್ಚಾತ್ತಾಪ ಪಡುವ ಪ್ರಸಂಗ ತಂದುಕೊಳ್ಳಬಾರದು ಎಂದು ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಹೇಳಿದರು. ಬಸವಜ್ಯೋತಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು ಹಾಗೂ ಜಮಖಂಡಿಯ ಶಹರ ಪೊಲೀಸ್ ಠಾಣೆಯ ಸಹಯೋಗದಲ್ಲಿ ಗುರುವಾರ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ'ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ದೊಡ್ಡಸ್ಥಿಕೆ ಅಥವಾ ಗೌರವದ ಲಕ್ಷಣವೆಂದು ಭ್ರಮಿಸಿ ದುಶ್ಚಟಗಳ ದಾಸರಾಗಬಾರದು. ಮೋಜು ಮಾಡಲು ಹೋಗಿ ಶಿಕ್ಷೆ ಅನುಭವಿಸುವಂತ ಸಂದರ್ಭ ತಂದುಕೊಳ್ಳಬಾರದು.

ಆಕರ್ಷಕ ಜಾಹೀರಾತುಗಳಿಗೆ ಮಾರು ಹೋಗಬಾರದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಎಎಸ್ಐ ಸಿ. ಎಸ್. ಚಲವಾದಿ ಮಾತನಾಡಿ, ಮಾದಕ ವಸ್ತುಗಳ ಮಾರಾಟ ಅಥವಾ ಸಾಗಾಟ ಕಂಡು ಬಂದಲ್ಲಿ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಪೊಲೀಸ್ ಕಾನ್ಸ್ಟೆಬಲ್ ಸದಾಶಿವ ಹೊಸೂರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಮಹಿಳಾ ಪೊಲೀಸ್ ಸಿಬ್ಬಂದಿ ಎಲ್. ಬಿ. ಕುಂಬಾರ ಉಪಸ್ಥಿತರಿದ್ದರು. ಉಪನ್ಯಾಸಕ ಶ್ರೀಕಾಂತ ಬೆಳ್ಳಿಹಾಳ ನಿರೂಪಿಸಿ, ವಂದಿಸಿದರು.

# ನೀಕಟಪೂರ್ವ ಜಿಲ್ಲಾಧಿಕಾರಿ ಜಾನಕಿ ಕೆ. ಎಮ್ ಅವರಿಗೆ ಬಿ.ವಿ.ವಿ.ಸಂಘದಿಂದ ಸನ್ಮಾನ



**ಬಾಗಲಕೋಟೆ :** ಜಿಲ್ಲೆಯ ಜಿಲ್ಲಾಧಿಕಾ-ರಿಯಾಗಿ ಎರಡು ವರ್ಷಗಳ ಸೇವೆ ಸಲ್ಲಿಸಿದ ನಿಕಟ ಪೂರ್ವ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ದಂಪತಿಗೆ ಬಿ.ವಿ.ವಿ.ಸಂಘದ ಬಿಳೂರ ಗುರುಬಸವ ಸಭಾಭವನದಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಡಾ. ವೀರಣ್ಣ ಚರಂತಿಮಠ ಅವರು ಬಿ.ವಿ.ವಿ.ಸಂಘದಿಂದ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಸಂಘದ ಎಲ್ಲ ಸದಸ್ಯರು, ಸಂಘದ ಮುಖ್ಯ ಸಲಹೆಗಾರರಾದ ಡಾ. ಮೀನಾ ಆರ್. ಚಂದಾವರಕರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮಾದಕ ದ್ರವ್ಯ ವ್ಯಸನ ಮುಕ್ತ ದಿನಾಚರಣೆ



**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಮಾದಕ ದ್ರವ್ಯ ವ್ಯಸನ ಮುಕ್ತ ದಿನಾಚರಣೆ ಆಚರಿಸಲಾಯಿತು.

ಮಹಾಲಿಂಗಪುರ ಪೊಲೀಸ್ ಠಾಣೆಯ ಎಎಸ್ಐ ಎಸ್. ಬಿ. ಜೈನರ್ ಅವರು ಎಲ್ಲ ಮಕ್ಕಳಿಗೆ ಕರಪತ್ರಗಳನ್ನು ವಿತರಿಸಿ ಬಳಿಕ ಪ್ರತಿಜ್ಞಾ ವಿಧಿ ಬೋಧಿಸಿದರು.

ಮಾದಕ ವ್ಯಸನ, ರಸ್ತೆ ಸುರಕ್ಷತಾ ನಿಯಮಗಳು, ಸೈಬರ್ ವಂಚನೆ ಇತ್ಯಾದಿಗಳ ಕುರಿತು ಅವರು ಮಾಹಿತಿ ನೀಡಿದರು.

ಪೋಲೀಸ ಕಾನ್ಸಟೇಬಲ್ ಗುರುರಾಜ ಕಳ್ಳಿಗುದ್ದಿ, ಮುಖ್ಯಗುರು ಎಸ್. ಎನ್. ಬ್ಯಾಳಿ, ಎಸ್ಡಿಎಂಸಿ ಅಧ್ಯಕ್ಷ ಮುತ್ತು ಪೂಜಾರಿ, ಅಜೀಮ್ ಪ್ರೇಮಜಿ ಫೌಂಡೇಶನ್ನಿನ ಶ್ರೀಶೈಲ ದಾವಲಟ್ಟಿ ಹಾಗೂ ಪಾಲಕರು, ಎಸ್ಡಿಎಂಸಿ ಸದಸ್ಯರು, ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಹೊಸಪೇಟೆ ತಾಲೂಕು ಅಹಿಂದ ಯುವ ವೇದಿಕೆ ಘಟಕದ ಅಧ್ಯಕ್ಷರಾಗಿ ಡಿ.ಶೇಖರ್ ಆಯ್ಕೆ



**ಹೊಸಪೇಟೆ :** ನಗರದ ಅಮರಾವತಿ ಪ್ರವಾಸಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿ.ಶೇಖರ್ ಅವರನ್ನು 9ನೇ ವಾರ್ಡ್ ಘಟಕದ ಅಹಿಂದ ಯುವ ವೇದಿಕೆ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು ಕಾರ್ಯಕ್ರಮವನ್ನು ಉದ್ದೇಶಿ .ಮಾತನಾಡಿದ ಅಹಿಂದ ತಾಲೂಕು ಅಧ್ಯಕ್ಷರಾದ ಕುಬೇರ ದಲ್ಲಾಲಿ ಅವರು ಅಹಿಂದ ಅಂದರೆ ಅಲ್ಪಸಂಖ್ಯಾತ ಹಿಂದುಳಿದ ದಲಿತ ವರ್ಗಗಳ ಅಂತನೇ ಅರ್ಥ ಅಹಿಂದ ಸಂಘಟನೆಯನ್ನು ಬಲಪಡಿಸಿ ಶೋಷಿತ ಸಮುದಾಯ ಪರವಾಗಿ ನಾವು ನೀವೆಲ್ಲರೂ ಹೋರಾಟ ಮಾಡಬೇಕಾಗಿದೆ ಪದಾಧಿಕಾರಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಬಲವಾಗಿ ಅಹಿಂದ ಸಂಘಟನೆ ಬೆಳೆಸಬೇಕು. ಮುಂದಿನ ದಿನಗಳಲ್ಲಿ ನಿಮ್ಮನ್ನು ಒಳ್ಳೆಯ ಪ್ರಬಲ ನಾಯಕನನ್ನಾಗಿ ಮಾಡುತ್ತದೆ ಸರಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ದೊರಕಿಸುವಲ್ಲಿ ನಿಸ್ವಾರ್ಥ ಸೇವೆ, ಹಿಂದುಳಿದ, ಅಸಂಖ್ಯಾತ, ದಲಿತ ಹಾಗೂ ಇತರೆ ಸಮುದಾಯಗಳಿಗೆ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಜಾಗೃತಿಗಾಗಿ ಈ ಸಂಘಟನೆ ಕಾರ್ಯನಿರ್ವಹಿಸಲಿದೆ ಎಂದರು ಈಗಾಗಲೇ ರಾಜ್ಯ ಸರ್ಕಾರ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮದಲ್ಲಿ ಯೋಜನೆಗಳನ್ನು ಬಿಡುಗಡೆ ಮಾಡಲಾಗಿದೆ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತು ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಬರುವಂತಹ ಯೋಜನೆಗಳನ್ನು ಎಲ್ಲಾ ವರ್ಗದವರು.ಪಡೆಬೇಕಾಗಿದೆ

ಅಹಿಂದ ಸಂಘಟನೆಯನ್ನು ಬಲಪಡಿಸಬೇಕು. ಎಂದು ಹೇಳಿದರು ಈ ಸಂದರ್ಭದಲ್ಲಿ ಅಹಿಂದ ಯುವ ವೇದಿಕೆಯ ಮಲನ ಗುಡಿ ಗ್ರಾಮ ಘಟಕದ ಅಧ್ಯಕ್ಷರಾದ ಬಿ. ನಾಗರಾಜ್. ಅಹಿಂದ ಯುವ ತಾಲೂಕು ಉಪಾಧ್ಯಕ್ಷರಾದ ಕೆ ಪಂಪಾಪತಿ. ಅಹಿಂದ ಯುವ ಪ್ರಧಾನ ಕಾರ್ಯದರ್ಶಿಯಾದ ಬಸವರಾಜ್ ಪಿ.ಕೆಡಿಪಿ ಜಿಲ್ಲಾ ಸದಸ್ಯರಾದ. ಬಸಲಿಂಗಪ್ಪ ಮೇಟಿ. ಕುರುಬ ಸಮಾಜದ ಹಿರಿಯ ನಾಯಕರು. ಕೆ ಬೆಟ್ಟಪ್ಪ. ಅನಂತೇಶ ನ ಗುಡಿ ಅಹಿಂದ ಯುವ ಗ್ರಾಮ ಘಟಕದ ಅಧ್ಯಕ್ಷರಾದ ದಮ್ಮೂರ್ ಮಂಜುನಾಥ್. ಅಹಿಂದ ಯುವ ಮುಖಂಡರಾದ ಡಿ. ರಾಮಚಂದ್ರ

26ನೇ ವಾರ್ಡ್ ಅಹಿಂದ ಯುವ ಘಟಕದ ಅಧ್ಯಕ್ಷರಾದ ದಸ್ತಗಿರಿ

ಅಹಿಂದ ಯುವ ನಾಗೇನಹಳ್ಳಿ ಗ್ರಾಮ ಘಟಕದ ಅಧ್ಯಕ್ಷರಾದ ನೂರು 10 ನೇ ವಾರ್ಡ್ ಘಟಕದ ಅಧ್ಯಕ್ಷ ಅಧ್ಯಕ್ಷರಾದ ಲಕ್ಷ್ಮಿ ಪತಿ.ಕುರುಬ ಸಮಾಜದ ಯುವ ಮುಖಂಡರಾದ ರಮೇಶ್. ಕೆ.ರಫೀಕ್ ರಾಜಶೇಖರ್ ಫಕೀರಪ್ಪ ನಾಗರಾಜ್. ಇನ್ನಿತರಿದ್ದರು.

# ಶ್ರೀಗಳ ನೇತೃತ್ವದಲ್ಲಿ ಹಿಂದು ರುದ್ರಭೂಮಿ ಸ್ವಚ್ಚತೆಗೆ ಚಾಲನೆ

## 18 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿರುವ ಹಿಂದು ರುದ್ರಭೂಮಿಯಲ್ಲಿ ಅಗತ್ಯವಾದ ಮೂಲಭೂತ ಸಮಸ್ಯೆಗಳಿಲ್ಲದೆ ಮತ್ತು ಅನೈತಿಕ ಚಟುವಟಿಕೆಗಳ ತಾಣ

**ಜಮಖಂಡಿ :** ಅಂದಾಜು ಹದಿನೆಂಟು ಎಕರೆ ವಿಸ್ತೀರ್ಣದ ಪ್ರದೇಶದಲ್ಲಿರುವ ಹಿಂದು ರುದ್ರಭೂಮಿಯಲ್ಲಿ ಅಗತ್ಯವಾದ ಮೂಲಭೂತ ಸಮಸ್ಯೆಗಳಿಲ್ಲದೆ ಮತ್ತು ಅನೈತಿಕ ಚಟುವಟಿಕೆಗಳ ತಾಣವಾಗಿ ಗಲೀಜುಗೊಂಡಿರುವ ಹಿನ್ನೆಲೆಯಲ್ಲಿ ನಗರದ ಹಿರಿಯರು ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರ ನೇತೃತ್ವದಲ್ಲಿ ಜೂನ್ 29 ರಂದು ಸ್ವಚ್ಚತಾ ಅಭಿಯಾನಕ್ಕೆ ಚಾಲನೆ ನೀಡಿದರು. ನಗರದ ರಾಜ್ಯ ಹೆದ್ದಾರಿಯಲ್ಲಿರುವ ಬಾಗಲಕೋಟ ವಿಶ್ವವಿದ್ಯಾಲಯದ ಎದುರಿಗೆ ಜಮಖಂಡಿ ನಗರದ ಎಲ್ಲ ಧರ್ಮದ ಜನರಿಗೆ ಇರತಕ್ಕ (ಮುಸ್ಲಿಂ ಧರ್ಮದವರು ಹೊರತು ಪಡಿಸಿ) ಹಿಂದು ರುದ್ರಭೂಮಿ ಇದ್ದು ಪ್ರತಿಯೊಂದು ಸಮುದಾಯದ ಜನರು ಇಲ್ಲಿಯೇ ಶವ ಸಂಸ್ಕಾರ ಮಾಡುತ್ತಾರೆ.

### ಪ್ರತಿ ರವಿವಾರ ಸ್ವಚ್ಚತಾ ಅಭಿಯಾನ

ಹಿಂದು ರುದ್ರಭೂಮಿ ಸಂರಕ್ಷಣೆಗಾಗಿ ಜಮಖಂಡಿ ನಗರದ ಹಿರಿಯರು, ಯುವಕರು ಸಹಿತ ಸಾರ್ವಜನಿಕರ ಜೊತೆಗೂಡಿ ಸ್ವಚ್ಚತಾ ಅಭಿಯಾನ ಇಂದಿನಿಂದ ಆರಂಭಿಸಲಾಗಿದೆ. ಪ್ರತಿ ರವಿವಾರ ಹಿಂದು ರುದ್ರಭೂಮಿಯಲ್ಲಿ ಸ್ವಚ್ಚತಾ ಅಭಿಯಾನ ನಡೆಯಲಿದೆ. ಪ್ರತಿಯೊಬ್ಬರು ಭಾಗಿಯಾಗುವ ಮೂಲಕ ಹಿಂದು ರುದ್ರಭೂಮಿ ರಕ್ಷಣೆ ಮಾಡಬೇಕಾಗಿದೆ. ಬಾಗಲಕೋಟ ಜಿಲ್ಲೆಯಲ್ಲಿ ಅತೀ ವಿಶಾಲವಾದ ಹಿಂದು ರುದ್ರಭೂಮಿ ಇದಾಗಿದ್ದು ಅದನ್ನು ರಕ್ಷಣೆ ಮಾಡುವದು ನಮ್ಮೆಲ್ಲರ ಕರ್ತವ್ಯವಾಗಬೇಕು.

–ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು
ಮುತ್ತಿನಕಂತಿ ಹಿರೇಮಠ ಜಮಖಂಡಿ.

---

### ಸ್ವಚ್ಚತೆಗೆ ಆದ್ಯತೆ:

ಪ್ರತಿಯೊಂದು ಧರ್ಮದವರಿಗೆ ಹಿಂದು ರುದ್ರಭೂಮಿ ಅವಶ್ಯಕವಾಗಿದ್ದು, ಅದರ ಸಂರಕ್ಷಣೆಯಲ್ಲಿ ನಗರಸಭೆ ಪಾತ್ರ ಬಹುಮುಖ್ಯವಾಗಿದೆ. ಇಂದು ನಡೆದ ಸ್ವಚ್ಚತಾ ಅಭಿಯಾನದಲ್ಲಿ ನಾನು ಕೂಡ ಭಾಗವಹಿಸಿದ್ದೇನೆ. ಸ್ವಚ್ಚತೆಯ ನಿರ್ವಹಣೆಗಾಗಿ ನಗರಸಭೆ ಪೌರಾಯುಕ್ತರ ಗಮನಕ್ಕೆ ತರುವ ಮೂಲಕ ಅಕ್ರಮ ಚಟುವಟಿಕೆ ನಿಯಂತ್ರಣಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುವ ಮೂಲಕ ಸುರಕ್ಷಿತ ಹಿಂದು ರುದ್ರಭೂಮಿಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ನಗರಸಭೆ ಕ್ರಮ ವಹಿಸಲಿದೆ. ಪ್ರತಿ ರವಿವಾರ ನಡೆಯಲಿರುವ ಸ್ವಚ್ಚತಾ ಅಭಿಯಾನದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು.

–ಪರಮಾನಂದ ಗವರೋಜಿ, ನಗರಸಭೆ ಅಧ್ಯಕ್ಷರು, ಜಮಖಂಡಿ.

### ಕ್ರಮ ಕೈಗೊಳ್ಳುತ್ತೇವೆ:

ನಗರದ ರಾಜ್ಯ ಹೆದ್ದಾರಿಯಲ್ಲಿ ಬರತಕ್ಕ ಹಿಂದು ರುದ್ರಭೂಮಿಯಲ್ಲಿ ಹಗಲು ಹೊತ್ತಿನಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ವಿಷಯ ನಮ್ಮ ಗಮನಕ್ಕೆ ಬಂದಿದೆ. ಹಿಂದು ರುದ್ರಭೂಮಿಯಲ್ಲಿ ಮಧ್ಯ ಸೇವನೆ, ಇಸ್ಪೀಟ ಆಟಗಳು, ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಮಾಡುವದಕ್ಕಾಗಿ ಕ್ರಮ ಜರುಗಿಸುವ ಮೂಲಕ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಅನಿರೀಕ್ಷಿತ ದಾಳಿ ಮೂಲಕ ಸಂಪೂರ್ಣವಾಗಿ ನಿಯಂತ್ರಿಸುವ ಕೆಲಸ ಪೋಲೀಸ ಇಲಾಖೆ ಮಾಡಲಿದೆ.

–ಮಲ್ಲಪ್ಪ ಮಡ್ಡಿ,
ಸಿಪಿಐ ಪೊಲೀಸ್ ಠಾಣೆ,
ಜಮಖಂಡಿ.

ಪ್ರತಿಂೞೊಬ್ಬರಿಗೞೂ ಅವಶ್ಯಕವಾಗಿರುವ ನಿಮಿತ್ಯ ಹಿಂದು ರುದ್ರಭೂಮಿಯನ್ನು ಉತ್ತಮವಾಗಿ ಇಟ್ಟುಕೊಳ್ಳುವದು ನಾಗರಿಕರ ಜವಾಬ್ದಾರಿಯಾಗಿದೆ. ವಿಶಾಲವಾಗಿರುವ ಹಿಂದು ರುದ್ರಭೂಮಿಯಲ್ಲಿ ಕಂಪೌಂಡ ಗೋಡೆ ಕುಸಿದು ಬಿದ್ದಿರುವ ಹಿನ್ನೆಲೆಯಲ್ಲಿ ಕೆಲವು ಅನಾಗರಿಕ ವ್ಯಕ್ತಿಗಳಿಗೆ ಅದು ಅನ್ಯ ಚಟುವಟಿ-ಕೆ ನಡೆಸಲು ಸುಗಮವಾಗಿದೆ. ಹಗಲು ಹೊತ್ತಿನಲ್ಲಿಯೇ ಇಸ್ಪೀಟ್ ಆಟದ ಸಹಿತ ಇತರೇ ಕಾನೂನುಬಾಹಿರ ಜೂಜಾಟದಲ್ಲಿ ತೊಡಗಿ ಕೊಂಡಿರುತ್ತಾರೆ.

ಹಿಂದು ರುದ್ರಭೂಮಿಯಲ್ಲಿ ಮದ್ಯ ಸೇವಿಸಿ ನಂತರ ಗಾಜಿನ ಬಾಟಲಿಗಳನ್ನು, ರಟ್ಟಿನ ಪೌಚ್ ಗಳನ್ನು ಶವ ಸಂಸ್ಕಾರಕ್ಕೆ ಜನರು ಆಗಮಿಸುವ ಸಂಚಾರ ಮಾರ್ಗದಲ್ಲಿಎಸೆಯುವಅನಾಗ-ರಿಕ ಘಟನೆಗಳು ನಡೆಯುತ್ತಿವೆ. ಸಂಬಂಧಿಸಿದ ನಗರಸಭೆ, ಪೊಲೀಸ್ ಇಲಾಖೆ ಮಾತ್ರ ಯಾವುದೇ ಕ್ರಮ ಕೈಗೊಂಡಿಲ್ಲ.

# ಅರಣ್ಯ ಪ್ರದೇಶದಲ್ಲಿ ಕುರಿ ಮೇಯಿಸಲು ಜಿಲ್ಲಾ ಕುರುಬರ ಸಂಘದದಿಂದ ಮನವಿ



**ಬಳ್ಳಾರಿ:** ಜಿಲ್ಲೆಯ ಸಂಡೂರು ತಾಲೂಕಿನ ವಿಠಲಾಪುರ ತುಮಟಿ ಸೇರಿದಂತೆ ಇತರ ಸುತ್ತಮುತ್ತಲ ಗ್ರಾಮಗಳ ಕುರಿಗಳನ್ನು ಅರಣ್ಯ ಪ್ರದೇಶದಲ್ಲಿ ಮೇಯಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಅರಣ್ಯ ಇಲಾಖೆಯ ಕ್ರಮವನ್ನು ವಿರೋಧಿಸಿ, ಬಳ್ಳಾರಿ ಜಿಲ್ಲಾ ಕುರುಬರ ಸಂಘದಿಂದ ಕುರಿಗಳನ್ನು ಮೇಯಿಸಲು ಅನುಮತಿ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಹಾಗೂ ಅರಣ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದೆ. ಮೇಲ್ಕಂಡ ಗ್ರಾಮಗಳ ಕುರಿಗಾಹಿಗಳ ಕುಟುಂಬಗಳಲ್ಲಿ ಸುಮಾರು 15,000 ಕುರಿಗಳಿದ್ದು , 280 ಕುರಿಗಾಹಿ ಕುಟುಂಬಗಳು ಕುರಿ ಸಾಕಣೆ ಮೂಲಕ ತಮ್ಮ ಕುಟುಂಬಗಳ ನಿರ್ವಹಣೆ ಮಾಡುತ್ತಿದ್ದಾರೆ.

ಈವರೆಗೆ ಯಾವುದೇ ಪರಿಸರ ಅಥವಾ ಅರಣ್ಯ ನಾಶವಾಗದೇ ಕುರಿ ಸಾಕಣೆ ಸುಗಮವಾಗಿ ನಡೆಯುತ್ತಿತ್ತು. ಆದರೆ ಇತ್ತೀಚೆಗೆ ಅರಣ್ಯ ಇಲಾಖೆ ಅರಣ್ಯ ಗಡಿಭಾಗದಲ್ಲಿ ತಡೆಗೋಡೆ ಹಾಗೂ ಮುಳ್ಳು ತಂತಿಗಳನ್ನು ಅಳವಡಿಸಿ, ಕುರಿಗಳನ್ನು ಮೇಯಲು ಅಡ್ಡಿಪಡಿಸುತ್ತಿರುವುದರಿಂದ,ಕುರಿಗಳ ಸಂರಕ್ಷಣೆಯಲ್ಲಿ ತೊಂದರೆ ಉಂಟಾಗಿದೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕುರಿ ಮೇಯಿಸಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಕುರುಬರ ಸಂಘದ, ಅಧ್ಯಕ್ಷ ಗಾದಿಲಿಂಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಮೋಹನ್, ಖಜಾಂಚಿ ಕಾಮರಾಜ್, ಪಾಟೀಲ್ ಗೂ ವಿಠಲಾಪುರ ಗ್ರಾಮದ ಕುರಿಗಾಹಿಗಳು ಸೇರಿದಂತೆ ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618